ಸಂಪುಟ 01 | ಸಂಚಿಕೆ 22 | ಮಂಗಳವಾರ 02 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**ಅಂತರರಾಷ್ಟ್ರೀಯ ಗುಲಾಮಗಿರಿ ನಿರ್ಮೂಲನ ದಿನ (International Day for the Abolition of Slavery) :** ಗುಲಾಮಗಿರಿಯ ಆಧುನಿಕ ರೂಪಗಳಾದ ಮಾನವ ಕಳ್ಳಸಾಗಣೆ, ಲೈಂಗಿಕ ಶೋಷಣೆ, ಬಾಲಕಾರ್ಮಿಕ ಪದ್ಧತಿ ಮತ್ತು ಬಲವಂತದ ವಿವಾಹಗಳನ್ನು ನಿರ್ಮೂಲನೆ ಮಾಡುವ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯು ಈ ದಿನವನ್ನು ಆಚರಿಸುತ್ತದೆ.

**ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ (National Pollution Control Day - India)** 1984 ರಲ್ಲಿ ಭೋಪಾಲ್ ಅನಿಲ ದುರಂತದಲ್ಲಿ ಮೃತಪಟ್ಟವರ ನೆನಪಿಗಾಗಿ ಮತ್ತು ಪರಿಸರ ಮಾಲಿನ್ಯದ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಭಾರತದಲ್ಲಿ ಆಚರಿಸಲಾಗುತ್ತದೆ. ಈ ದಿನದಂದು ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರತಿಜ್ಞೆಗಳನ್ನು ತೆಗೆದುಕೊಳ್ಳಲಾಗುತ್ತದೆ.

**ವಿಶ್ವ ಗಣಕ ಸಾಕ್ಷರತಾ ದಿನ (World Computer Literacy Day):** ಡಿಜಿಟಲ್ ತಂತ್ರಜ್ಞಾನದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಹೆಚ್ಚು ಜನರನ್ನು ಡಿಜಿಟಲ್ ಜಗತ್ತಿಗೆ ಸಂಪರ್ಕಿಸಲು ಈ ದಿನವನ್ನು ಆಚರಿಸಲಾಗುತ್ತದೆ. ರಾಷ್ಟ್ರೀಯ ಕೈ ತೊಳೆಯುವ ಜಾಗೃತಿ ಸಪ್ತಾಹ: ಪ್ರತಿ ವರ್ಷ ಡಿಸೆಂಬರ್ ಮೊದಲ ಪೂರ್ಣ ವಾರದಲ್ಲಿ ರಾಷ್ಟ್ರೀಯ ಕೈ ತೊಳೆಯುವ ಜಾಗೃತಿ ಸಪ್ತಾಹವನ್ನು ಆಚರಿಸಲಾಗುತ್ತದೆ. ವಿಶೇಷವಾಗಿ ಶೀತ ಮತ್ತು ಜ್ವರದ ಸಮಯದಲ್ಲಿ ಸೂಕ್ಷ್ಮಜೀವಿಗಳು ಮತ್ತು ಕಾಯಿಲೆಗಳು ಹರಡುವುದನ್ನು ತಡೆಗಟ್ಟಲು ಸರಿಯಾದ ಕೈ ನೈರ್ಮಲ್ಯವನ್ನು ಉತ್ತೇಜಿಸುವುದು ಇದರ ಗುರಿಯಾಗಿದೆ. ಈ ವಾರ ಕನಿಷ್ಠ 20 ಸೆಕೆಂಡುಗಳ ಕಾಲ ಸೋಪ್ ಮತ್ತು ನೀರಿನಿಂದ ಕೈಗಳನ್ನು ಸರಿಯಾಗಿ ತೊಳೆಯುವ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ, ಇದು ಸೋಂಕು ಮತ್ತು ರೋಗ ಹರಡುವುದನ್ನು ನಿಲ್ಲಿಸಲು ಅತ್ಯಂತ ಪರಿಣಾಮಕಾರಿ ಮಾರ್ಗಗಳಲ್ಲಿ ಒಂದಾಗಿದೆ.

## ಸುಭಾಷಿತ

ನಿಮ್ಮ ಹೃದಯ ಏನು ಹೇಳುತ್ತದೆಯೋ
ಅದನ್ನು ಮಾತ್ರ ಮಾಡಿ, ಅದು ನಿಮಗೆ
ನೆಮ್ಮದಿ, ಸಮಾಧಾನ ಮತ್ತು ಧನ್ಯತೆ
ತಂದುಕೊಡುತ್ತದೆ.

ಡಯಾನಾ ವೇಲ್ಸ್ ರಾಜಕುಮಾರಿ

# ಎಸ್ಐಆರ್ ಕುರಿತ ಚರ್ಚೆಗೆ ವಿಪಕ್ಷಗಳ ಆಗ್ರಹ :ಲೋಕಸಭೆಯಲ್ಲಿ ಕೋಲಾಹಲ, ಸದನ ಮುಂದೂಡಿಕೆ

**ನವದೆಹಲಿ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಕುರಿತು ಚರ್ಚೆಗೆ ಒತ್ತಾಯಿಸಿ ಪ್ರತಿಪಕ್ಷಗಳು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಲೋಕಸಭಾ ಕಲಾಪವನ್ನು ಮಧ್ಯಾಹ್ನದವರೆಗೆ ಮುಂದೂಡಲಾಯಿತು.15 ಕಲಾಪಗಳನ್ನು ನಡೆಸುವ ಚಳಿಗಾಲದ ಅಧಿವೇಶನದ ಮೊದಲ ದಿನ ಮಧ್ಯಾಹ್ನ 2 ಗಂಟೆಯವರೆಗೆ ಎರಡು ಬಾರಿ ಮುಂದೂಡಿಕೆಯಾಯಿತು.**

ಹಿಂದಿನ ಮುಂದೂಡಿಕೆಯ ನಂತರ ಮಧ್ಯಾಹ್ನ 12 ಗಂಟೆಗೆ ಸದನ ಮತ್ತೆ ಸೇರಿದ ನಂತರ ಕಲಾಪ ಸುಮಾರು 12 ನಿಮಿಷಗಳ ಕಾಲ ನಡೆಯಿತು.ಹಲವಾರು ವಿರೋಧ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಸದನದ ಬಾವಿಗೆ ಧಾವಿಸಿ, ಎಸ್ಐಆರ್‌ಕುರಿತು ಚರ್ಚೆಗೆ ಒತ್ತಾಯಿಸಿದರು. ಶೂನ್ಯ ವೇಳೆಯ 12 ನಿಮಿಷಗಳ ಅವಧಿಯಲ್ಲಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2025-2026 ರ ಅನುದಾನಕ್ಕಾಗಿ ಪೂರಕ ಬೇಡಿಕೆಗಳನ್ನು ಮಂಡಿಸುವುದರ ಜೊತೆಗೆ



ಮೂರು ಮಸೂದೆಗಳನ್ನು ಮಂಡಿಸಿದರು. ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ಸುಂಕ ವಿಧಿಸುವ ಎರಡು ಮಸೂದೆಗಳು ಹಾಗೂ ಪಾನ್ ಮಸಾಲಾ ತಯಾರಿಕೆಯ ಮೇಲೆ ಹೊಸ ಸೆಸ್ ಅನ್ನು ಪರಿಚಯಿಸಲಾಯಿತು.

ಅವು ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ, 2025 ಮತ್ತು ಆರೋಗ್ಯ ಭದ್ರತೆ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ, ಮಣಿಪುರ ಸರಕು ಮತ್ತು ಸೇವಾ ತೆರಿಗೆ (ಎರಡನೇ ತಿದ್ದುಪಡಿ) ಮಸೂದೆಯನ್ನು ಹಣಕಾಸು ಸಚಿವರು ಪರಿಚಯಿಸಿದರು. ರಾಜ್ಯವು ರಾಷ್ಟ್ರಪತಿ ಆಳ್ವಿಕೆಯಲ್ಲಿರುವ ಕಾರಣ, ಮಣಿಪುರ ಜಿಎಸ್‌ಟಿಯ ಕುರಿತು ಸರ್ಕಾರವು ಇದಕ್ಕೂ ಮೊದಲು ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು.

ವಿರೋಧ ಪಕ್ಷದ ಸದಸ್ಯರು ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದ್ದರಿಂದ, ಸದನವನ್ನು ಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಲಾಯಿತು.ನಿನ್ನೆ ನಡೆದ ಸರ್ವಪಕ್ಷ ಸಭೆಯಿಂದ ಹೊರಬರುತ್ತಿರುವ ವಿರೋಧ ಪಕ್ಷದ ನಾಯಕರು, ಎಸ್ಐಆರ್ ಕುರಿತು ಚರ್ಚೆಗೆ ಒತ್ತಾಯಿಸುವುದಾಗಿ ಹೇಳಿದರು.

ಚುನಾವಣಾ ಆಯೋಗವು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಛತ್ತೀಸ್‌ಗಢ, ಗೋವಾ, ಗುಜರಾತ್, ಕೇರಳ, ಮಧ್ಯಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಎಸ್ಐಆರ್ ಘೋಷಿಸಿತ್ತು. ಇವುಗಳಲ್ಲಿ, ತಮಿಳುನಾಡು, ಪುದುಚೇರಿ, ಕೇರಳ ಮತ್ತು ಪಶ್ಚಿಮ ಬಂಗಾಳಗಳು 2026 ರಲ್ಲಿ ಚುನಾವಣೆಗೆ ಹೋಗುತ್ತವೆ. 2026 ರಲ್ಲಿ ಚುನಾವಣೆಗಳು ನಡೆಯಲಿರುವ ಅಸ್ಸಾಂನಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಪ್ರತ್ಯೇಕವಾಗಿ ಘೋಷಿಸಲಾಯಿತು. ಇದನ್ನು ವಿಶೇಷ ಪರಿಷ್ಕರಣೆ ಎಂದು ಕರೆಯಲಾಗುತ್ತಿದೆ.

# ತೊಗರಿ ಖರೀದಿ ಕೇಂದ್ರ ತೆರೆಯಲು ತಹಶೀಲ್ದಾರ್ ಗೆ ಮನವಿ



ನೈಜ್ಯ ದೇಸೆ ನ್ಯೂಸ್

ಮಸ್ಕಿ: ಇಂದು ದಿನಾಂಕ 01/12/2025 ರಂದು ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕ ತಹಶೀಲ್ದಾರ್ ರವರಿಗೆ ಮಸ್ಕಿ ತಾಲೂಕಿನಲ್ಲಿ ತೊಗರಿ ಖರೀದಿ ಕೇಂದ್ರ ಮತ್ತು ಕೃಷಿ ಉತ್ಪನ್ನ **ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ಮಾರಾಟವಾಗುವ ಎಲ್ಲಾ ಉತ್ಪನ್ನಗಳ ಖರೀದಿ ಕೇಂದ್ರಗಳನ್ನು ತೆರೆದು ಖರೀದಿಸಬೇಕು.**

ತಾಲೂಕಿನಲ್ಲಿ ಕೊರತೆ ಇರುವ ಇಲಾಖೆಗಳು ಮತ್ತು ಸಿಬ್ಬಂದಿಗಳ ಭರ್ತಿಗೆ ಕ್ರಮ ವಹಿಸುವಂತೆ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ರಾಷ್ಟ್ರೀಕೃತ ಬ್ಯಾಂಕುಗಳು ಕೃಷಿ ಸಾಲ ವಸತಿಗಾಗಿ ಲೀಗಲ್ ನೋಟಿಸ್ ಕಳಿಸುವುದು ನ್ಯಾಯಾಲಯಗಳಲ್ಲಿ ದಾವೆ ಕೊಡುವುದನ್ನು ಮುಂದುವರಿಸಿದ್ದಾರೆ ಸತತ ಬರಗಾಲ ಈ ವರ್ಷ ಅತಿವೃಷ್ಟಿ ಅಲ್ಲದೆ ಮಾರುಕಟ್ಟೆಯಲ್ಲಿ ರೈತರ ಯಾವುದೇ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಕೂಡ ಸಿಗುತ್ತಿಲ್ಲ ಇಂತಹ ಪರಿಸ್ಥಿತಿಯಲ್ಲಿ ಸಾಲಮರು ಪಾವತಿಸುವುದು ಹೇಗೆ ಕಾರಣಕ್ಕಾಗಿ ಬ್ಯಾಂಕುಗಳಿಗೆ ತಮ್ಮ ಮೂಲಕ ಸರ್ಕಾರ ಮತ್ತು ಜಿಲ್ಲಾಡಳಿತದ ಗಮನಕ್ಕೆ ತಂದು ರೈತರ ನೆರವಿಗೆ ಧಾವಿಸಬೇಕೆಂದು ಇನ್ನಿತರ ವಿಷಯಗಳ ಕುರಿತು ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶರಣಪ್ಪ ಮರಳಿ ಸುಲ್ತಾನಪುರ, ಜಿಲ್ಲಾಧ್ಯಕ್ಷರಾದ ರಾಮಯ್ಯ ಜವಳಗೆರೆ, ಮಸ್ಕಿ ತಾಲೂಕ ಅಧ್ಯಕ್ಷರಾದ ವೆಂಕಟೇಶ ಸಂತೆಕೆಲ್ಲೂರು, ಜಿಲ್ಲಾ ಕಾರ್ಯಾಧ್ಯಕ್ಷರಾದ ವೆಂಕಟೇಶ ರತ್ನಾಪುರ ಹಟ್ಟಿ, ಮಸ್ಕಿ ತಾಲೂಕು ಗೌರವಾಧ್ಯಕ್ಷರಾದ ಲಾಲಸಾಬ ನಾಡಗೌಡ, ಸಿಂಧನೂರು ತಾಲೂಕು ಗೌರವಾಧ್ಯಕ್ಷರಾದ ಪರಯ್ಯ ಸ್ವಾಮಿ, ಸೇರಿದಂತೆ ಹಲವು ಗ್ರಾಮಗಳ ರೈತ ಮುಖಂಡರು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅದ್ದೂರಿ ಶ್ರೀ ವೀರಭದ್ರೇಶ್ವರ ಕಾರ್ತಿಕೋತ್ಸವ ಹಾಗೂ ನೂತನ ಮಹಾರಥೋತ್ಸವ

ನೈಜ್ಯ ದೇಸೆ ನ್ಯೂಸ್

ಪ್ರತಿ ವರ್ಷದಂತೆ ಸಿಂಧನೂರು ಮುಖ್ಯ ಹಳೇ ಬಜಾರದಲ್ಲಿರುವ ಶ್ರೀ ವರಸಿದ್ಧಿವಿನಾಯಕ, ಶ್ರೀ ಚಂದ್ರಮೌಳೇಶ್ವರ ಹಾಗೂ ದುಷ್ಟ ನಿಗ್ರಹ ಜಗತ್ ಕಲ್ಯಾಣಕಾರಕ ಮಂಗಲದಾಯಕನಾದ ಶ್ರೀ ವೀರಭದ್ರೇಶ್ವರ ಕಾರ್ತಿಕೋತ್ಸವ ನಡೆಯಿತು.



ಬೆಳಿಗ್ಗೆ ರುದ್ರಾಭಿಷೇಕ ಮತ್ತು ವೀರಗಾಸೆ ತಂಡದೊಂದಿಗೆ ಗಂಗಸ್ಥಳಗೆ ತೆರಳಿ ಸಿಂಧನೂರಿನ ಪ್ರಮುಖ ಬೀದಿಗಳ ಮೂಲಕ ಮೆರವಣಿಗೆ ಮದ್ಯಾಹ್ನ ದೇವಸ್ಥಾನವನ್ನು ತಲುಪಿತ್ತು. ಸಾಯಂಕಾಲ ನೂತನ ಮಹಾರಥೋತ್ಸವ ಸಕಲ ಭಕ್ತಾದಿಗಳ . ನಂದಿಕೋಲು, ವೀರಗಾಸೆ ಕುಣಿತ ಮತ್ತು ಡೊಳ್ಳುವಿನೊಂದಿಗೆ ನಗರದ ಹನುಮಾನ್ ದೇವಸ್ಥಾನದ ವರೆಗೂ ತಲುಪಿ ದೇವಸ್ಥಾನದ ಕಡೆಗೆ ರತೋಸ್ತವ ನಡೆಯಿತು . ಈ ಒಂದು ಕಾರ್ತಿಕೋಸ್ತವದಲ್ಲಿ ದೇವಸ್ಥಾನ ಸದ್ಯಸರು ಮತ್ತು ಭಕ್ತಾದಿಗಳು ಪಾಲ್ಗೊಂಡು ಯಶಸ್ವಿ ಗೊಳಿಸಿದರು.

## ನಿಮ್ಮ ಹಣ ನಿಮ್ಮ ಹಕ್ಕು ಅಭಿಯಾನಕ್ಕೆ ಚಾಲನೆ

ನೈಜ್ಯ ದೇಸೆ ನ್ಯೂಸ್

ಸಿಂಧನೂರಿನ ಬಪ್ಪೂರು ರಸ್ತೆಯಲ್ಲಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ "ಗೀತಾ ಜಯಂತಿಯ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.



ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜ್ ರವರ ನೇತೃತ್ವದಲ್ಲಿ ಆಶ್ರಮದ ಭಕ್ತರು ಶ್ರೀ ಭಗವದ್ಗೀತಾ ಪಾರಾಯಣ, ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ಮಾಡಿದರು, ನಂತರ ಪೂಜ್ಯ ಸ್ವಾಮೀಜೀಯವರು ಭಜನೆ, ಭಗವಾನ್ ಶ್ರೀ ರಾಮಕೃಷ್ಣರಿಗೆ ಹಾಗೂ ಭಗವಾನ್ ಶ್ರೀ ಕೃಷ್ಣನಿಗೆ ಮತ್ತು ಶ್ರೀಮದ್ಭಗವದ್ಗೀತೆಗೆ ಮಹಾಮಂಗಳಾರತಿ ಕಾರ್ಯಕ್ರಮಕೊಟ್ಟರು... ಕಾರ್ಯಕ್ರಮದಲ್ಲಿ ಆಶ್ರಮದ ಭಕ್ತರು ಭಾಗವಹಿಸಿದ್ದರು..

## ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಗೀತಾ ಜಯಂತಿ ಆಚರಣೆ

ನೈಜ್ಯ ದೇಸೆ ನ್ಯೂಸ್

**ಸಿಂಧನೂರಿನ ಬಪ್ಪೂರು ರಸ್ತೆಯಲ್ಲಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ "ಗೀತಾ ಜಯಂತಿಯ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.**



ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜ್ ರವರ ನೇತೃತ್ವದಲ್ಲಿ ಆಶ್ರಮದ ಭಕ್ತರು ಶ್ರೀ ಭಗವದ್ಗೀತಾ ಪಾರಾಯಣ, ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ಮಾಡಿದರು, ನಂತರ ಪೂಜ್ಯ ಸ್ವಾಮೀಜೀಯವರು ಭಜನೆ, ಭಗವಾನ್ ಶ್ರೀ ರಾಮಕೃಷ್ಣರಿಗೆ ಹಾಗೂ ಭಗವಾನ್ ಶ್ರೀ ಕೃಷ್ಣನಿಗೆ ಮತ್ತು ಶ್ರೀಮದ್ಭಗವದ್ಗೀತೆಗೆ ಮಹಾಮಂಗಳಾರತಿ ಕಾರ್ಯಕ್ರಮಕೊಟ್ಟರು... ಕಾರ್ಯಕ್ರಮದಲ್ಲಿ ಆಶ್ರಮದ ಭಕ್ತರು ಭಾಗವಹಿಸಿದ್ದರು.

## ಸಂಸತ್ ಚಳಿಗಾಲದ ಅಧಿವೇಶನ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ಕಾರ್ಯತಂತ್ರ

ನೈಜ್ಯ ದೇಸೆ ನ್ಯೂಸ್

**ನವದೆಹಲಿ: ಇಂದಿನಿಂದ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪ್ರತಿಪಕ್ಷ ಕಾಂಗ್ರೆಸ್ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ನಿರ್ಧರಿಸಿದೆ.**



ರಾಷ್ಟ್ರೀಯ ಭದ್ರತೆ, ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ಮತ್ತು ರಾಷ್ಟ್ರ ರಾಜಧಾನಿಯ ವಾಯು ಮಾಲಿನ್ಯ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾರ್ಯತಂತ್ರ ರೂಪಿಸಿದೆ. ಆದಾಗ್ಯೂ, ಇಂದು ಬೆಳಿಗ್ಗೆ ಇಂಡಿಯಾ ಬಣದ ನಾಯಕರ ಜೊತೆಗಿನ ಚರ್ಚೆಯ ನಂತರ ಪಕ್ಷ ಅಧಿವೇಶನದಲ್ಲಿ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ ಎನ್ನಲಾಗಿದೆ. ಕಾಂಗ್ರೆಸ್ ಸಂಸದೀಯ ಮಂಡಳಿ ಅಧ್ಯಕ್ಷೆ ಸೋನಿಯಾ ಗಾಂಧಿ ಅಧ್ಯಕ್ಷತೆಯಲ್ಲಿ ಭಾನುವಾರ ಸಂಜೆ ನಡೆದ ಕಾಂಗ್ರೆಸ್ ಸಂಸ ದೀಯ ಕಾರ್ಯತಂತ್ರ ಗುಂಪಿನ

# ಬಸ್ ಘಟಕ ಹಾಗೂ ನಿಲ್ದಾಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವುದು ಅರುಣ್ ಕುಮಾರ್ ಪಾಟೀಲ್

ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ಡಿ.1 ತಾಲೂಕಿನ ಬಸ್ ನಿಲ್ದಾಣ ಹಾಗೂ ಬಸ್ ಡಿಪೋ ಗೆ ಭೇಟಿ ನೀಡಿ ವೀಕ್ಷಣೆ ಮಾಡಿ ಬಸ್ ಘಟಕ ಹಾಗೂ ನಿಲ್ದಾಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವುದು. ಇಲ್ಲಿಯ ಬಸ್ ನಿಲ್ದಾಣ, ಶೌಚಾಲಯ ಹಾಗೂ ಬಸ್ ನಿಲ್ದಾಣದ ಸುತ್ತ ಕಂಪೌಂಡ್ ಗೋಡೆಗೆ ಕಾಂಪ್ಲೆಕ್ಸ್ ನಿರ್ಮಿಸಿ ಇಲಾಖೆಗೆ ಹೆಚ್ಚಿನ ಆದಾಯ ಬರುವಂತೆ ಕ್ರಮವಹಿಸಿ, ಶಕ್ತಿ ಯೋಜನೆಯ ಸಾವಲಂಬಿ ಮಹಿಳೆಯರ ಪ್ರಯಾಣದಿಂದ ಬದುಕು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ರಾಜ್ಯ ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾಗಿದೆ. ಲಿಂಗಸಗೂರು ಘಟಕಕ್ಕೆ ಹೊಸ ಬಸ್ ಬಿಡಲು ಕ್ರಮವಹಿಸಲಾಗುವುದು ಎಂದು ಸಾರಿಗೆ ನಿಗಮದ ಅಧ್ಯಕ್ಷರಾದ ಅರುಣ್ ಕುಮಾರ್ ಪಾಟೀಲ್ ಹೇಳಿದರು.**

ಅವರು ಬಸ್ ನಿಲ್ದಾಣವನ್ನು ವೀಕ್ಷಣೆ ಮಾಡಿ ವಿದ್ಯಾರ್ಥಿಗಳ ಮತ್ತು ಪ್ರಯಾಣಿಕರ ಜೊತೆ ಸಮಾಲೋಚನೆ ಮಾಡಿ ಸರಿಯಾದ ರೀತಿ ಸಂಚಾರ ಸುಗಮಗೊಳಿಸಿ ಎಂದು ಅಧಿಕಾರಿಗಳಿಗೆ



ಸೂಚಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಜಿಲ್ಲೆಯಲ್ಲಿ ಅತಿ ದೊಡ್ಡ ಘಟಕವೆಂದು ಹೆಸರುವಾಸಿ ಯಾಗಿರುವ ಘಟಕವಾಗಿದ್ದು, ತಾಲೂಕಿನಲ್ಲಿ 133 ಸಂಚಾರ ರೂಟ್ ಗಳಲ್ಲಿ ಎಲ್ಲಾ ರೂಟ್ ಗಳ ಬಸ್ ಸಂಚಾರ ಸುಗಮಗೊಳಿಸುವ ನಿಟ್ಟಿನಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಸರಿಯಾದ ಸಮಯಕ್ಕೆ ಬಸ್ ಬಿಡುವ ಹೊಸ ಪ್ರಯತ್ನಕ್ಕೆ ಇಲಾಖೆ ಮುಂದಾಗಿದ್ದು, ಲಿಂಗಸಗೂರು ಘಟಕಕ್ಕೆ ಬೇಡಿಕೆಯಂತೆ ಹೊಸ ಬಸುಗಳನ್ನು ಖರೀದಿಸಲು ಸರ್ಕಾರದ ಪ್ರಸ್ತಾವನೆಯಲ್ಲಿ ಈಗಾಗಲೇ 600 ಬಸ್ಸು ಗಳ ಖರೀದಿಗೆ ಆಡಳಿತ ಅನುಮೋದನೆ ನೀಡಿದ್ದು ಇಲಾಖೆಗೆ ಹೊಸಬಸ್ಸು ಗಳು ಬಂದ ತಕ್ಷಣ ತಾಲೂಕಿಗೆ ಕಳಿಸಲು ಕ್ರಮವಹಿಸುತ್ತೇವೆ ಎಂದು ಹೇಳಿದರು. ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಶಕ್ತಿ ಯೋಜನೆಯಿಂದ, ಮಹಿಳೆಯರ ಸಾವಲಂಬಿ ಬದುಕಿಗೆ ದಾರಿ ದೀಪವಾಗಿದ್ದು ಶಕ್ತಿ ಯೋಜನೆಗೆ ದೇಶಾದ್ಯಂತ ಉತ್ತಮ ಪ್ರಶಂಸೆ ಬಂದಿದ್ದು.

ಮಾದರಿ ಯೋಜನೆಯಾಗಿ ಬೇರೆ ಬೇರೆ ರಾಜ್ಯದ ಸರ್ಕಾರಗಳು ಇದರ ಅನುಷ್ಠಾನವನ್ನು ಪ್ರಶಂಸೆ ಮಾಡುತ್ತಿದ್ದಾರೆ. ತಾಲೂಕಿನ ಬಸ್ ನಿಲ್ದಾಣ ಜಾಗ ದೊಡ್ಡದಾಗಿದ್ದು ಶೌಚಾಲಯ ಸ್ವಲ್ಪ ಚಿಕ್ಕದಾಗಿದ್ದು ಅದನ್ನು ತೀವ್ರವಾಗಿ ಹೊಸ ಶೌಚಾಲಯ ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಿದರು. ಲಿಂಗಸಗೂರು ಪಟ್ಟಣದಿಂದ ದೊಡ್ಡ ದೊಡ್ಡ ನಗರಗಳಿಗೆ ಸಂಚರಿಸಲು ನೂತನ ಸಿಸ್ಟರ್ ಬಸ್ ನೀಡಲು ಮಾಜಿ ಶಾಸಕ ಡಿ.ಎಸ್ ಹುಲಗೇರಿ ಯವರು ಸರ್ಕಾರಕ್ಕೆ ಪತ್ರ ಬರೆದಿದ್ದು, ಆದಷ್ಟು ಬೇಗನೆ ಹೊಸ ಬಸ್ಸು ಗಳನ್ನು ನೀಡಿ ಪ್ರಯಾಣಿಸುವ ಪ್ರಯಾಣಿಕರಿಗೆ ಅನುಕೂಲ ಮಾಡುವ ರೀತಿ ಕ್ರಮ ವಹಿಸಲಾಗುವುದು, ಪ್ರಯಾಣಿಕರ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಶಾಲಾ ಕಾಲೇಜಿಗೆ ಮತ್ತು ತಮ್ಮ ಗ್ರಾಮಕ್ಕೆ ಹೊರಡಲು ಹಳೆ ಬಸ್ ಗಳನ್ನು ತೆಗೆದು ಹೊಸ ಬಸ್ಸು ಗಳನ್ನು ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಸ್ಟೇಜ್ ಒಂದರಿಂದ ಇನ್ನೊಂದು ಸ್ಟೇಜ್ ಬಸ್ಸಿನ ದರ ದುಬಾರಿಯಾಗಿದ್ದು ಪ್ರಯಾಣಿಸುವ ದರದಲ್ಲಿ ಹೆಚ್ಚು ಕಾಣುತ್ತಿದ್ದು,

ಬೇರೆ ಮೂರು ನಿಗಮದಲ್ಲಿ ಹೋಲಿಸಿದರೆ ಕಲ್ಯಾಣ ಕರ್ನಾಟಕದ ಸಾರಿಗೆ ನಿಗಮದ ದರದಲ್ಲಿ ವ್ಯತ್ಯಾಸವಿದ್ದು ನಮ್ಮ ಕಲ್ಯಾಣ ಕರ್ನಾಟಕ ಪ್ರಯಾಣದ ದರವನ್ನು ಪರಿಶೀಲಿಸಲು ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ. ಉತ್ತರಿಸಿದ ಸಾರಿಗೆ ನಿಗಮದ ಅಧ್ಯಕ್ಷರು ಇದನ್ನು ರಾಜ್ಯ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳ ಜೊತೆ ಚರ್ಚಿಸಿ ಸರಿಪಡಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ್, ಪಂಚ ಗ್ಯಾರಂಟಿ ಯೋಜನೆ ಅಧ್ಯಕ್ಷ ವೆಂಕಟೇಶ್ ಆರ್ ಗುತ್ತೇದ್ದಾರ್, ಎಪಿಎಂಸಿ ಅಧ್ಯಕ್ಷ ಅಮರೇಶ್ ಹೆಸರೂರ, ಪ್ರಚಾರ ಸಮಿತಿ ಅಧ್ಯಕ್ಷ ಮೊಹಮ್ಮದ್ ರಫಿ, ಮುಖಂಡರಾದ ಬಾಬಾಖಾಜಿ, ಖಾಜಾ ಹುಸೇನ್ ಪುಲಾವಲೆ, ಉಮೇಶ ಹುನುಕುಂಟ ಗದ್ದನಗೌಡ ನಂದಿಹಾಳ್, ಅಮರೇಶ್ ಮಡ್ಡಿ, ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

ಅಂತರವಿರಬೇಕು
ಬಾನು ಭುವಿಯಂತೆ
ಆದರೂ ನಂಟಿಲ್ಲವೆ
ಹೂವಿನೊಳಗಿನ ಮಕರಂದದಂತೆ

ಭಿನ್ನತೆಯಿರಬೇಕು
ನದಿ ಸಾಗರದಂತೆ
ಆದರೂ ಸಂಬಂಧವಿದೆ
ಈ ದೇಹ ಆತ್ಮಗಳಂತೆ

ಸಾಗುತ್ತಿರಬೇಕು
ಹಗಲು ರಾತ್ರಿಗಳಂತೆ
ಆದರೂ ಎರಡಕ್ಕೂ ತಳುಕಿದೆ ಬದುಕಿ
ನೊಳಗಣ ಸುಖದುಃಖದಂತೆ

ನೆಲೆ ನಿಂತಿರಬೇಕು
ಬೆಟ್ಟ ಕಣಿವೆಗಳಂತೆ
ಆದರೂ ಬದುಕ ಬೇಕಿದೆ ಎರಡಕ್ಕೂ
ನೆಲೆ ನೀಡಿದ ಆ ಭೂಮಿಯಂತೆ

ಬೆಳಗುವುದ ಕಲಿತಿರಬೇಕು
ಆ ಸೂರ್ಯ ಚಂದ್ರರಂತೆ
ಆದರೂ ಮುಗುಳ್ನಗುತ್ತಿರಬೇಕು

ಶ್ರೀ ತುಳಸಿದಾಸ ಬಿ ಎಸ್

# ವಿಶ್ವ ಏಡ್ಸ್ ದಿನ ಅಂಬರೀಶ್ ಪಾಟೀಲ್ ತಾಲೂಕು ಆರೋಗ್ಯ ಅಧಿಕಾರಿಗಳಿಂದ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕ ರಾಯಚೂರು ತಾಲೂಕ್ ಆರೋಗ್ಯ ಅಧಿಕಾರಿಗಳು ಕಚೇರಿ ಲಿಂಗಸೂಗೂರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಲಿಂಗಸುಗೂರು, ಶ್ರೀ ಅಲ್ಲಮಪ್ರಭು ಪ್ಯಾರಾಮೆಡಿಕಲ್ ಕಾಲೇಜ್ ಲಿಂಗಸಗೂರು & ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಲಿಂಗಸೂಗುರು ಇವರುಗಳ ಸಂಯೋಗದೊಂದಿಗೆ ದಿನಾಂಕ 1.12.2025 ರಂದು ವಿಶ್ವ ಏಡ್ಸ್ ದಿನಾಚರಣೆಯನ್ನು ಬೆಳಿಗ್ಗೆ 10 ಗಂಟೆ ಗೆ ತಾಲೂಕು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಶ್ರೀ ಅಂಬರೀಶ್ ಪಾಟೀಲ್ ತಾಲೂಕು ಆರೋಗ್ಯ ಅಧಿಕಾರಿಗಳು.ತಜ್ನ ವೈದ್ಯರು ಚಾಲನೆ ನೀಡಿದರು.**

ಕಾರ್ಯಕ್ರಮ ಉದ್ದೇಶಿಸಿ ಡಾ. ಖಾಜಾಹುದ್ದೀನ್ ಹಿರಿಯ ವೈದ್ಯಾಧಿಕಾರಿಗಳು ಶಾತನಾಡಿ ಎಚ್ಐವಿ ಇಂದ ದೂರವಿರಲು ಸರಿಯಾಗಿ ಅರಿತುಕೊಳ್ಳಬೇಕು ಹಾಗೂ ಮುಟ್ಟುವುದರಿಂದ, ಜೊತೆಯಲ್ಲಿ ಇರೋದ್ರಿಂದ ಎಚ್ಐವಿ ಹರಡುವುದಿಲ್ಲ ಎಂದು ಮಾಹಿತಿ ನೀಡಿದರು

ತಾಲೂಕು ಆರೋಗ್ಯ ಅಧಿಕಾರಿ ಡಾ: ಅಮರೇಶ ಪಾಟೀಲ್ ರವರು ಎಚ್ಐವಿ ಏಡ್ಸ್ ತಡೆಗಟ್ಟಲು ತಾಲೂಕುಸಾರ್ವಜನಿಕ ಆಸ್ಪತ್ರೆಯಲ್ಲಿ ಆಪ್ತ ಸಮಾಲೋಚಕರು ಸರಿಯಾದ ಮಾರ್ಗದರ್ಶನ ಮತ್ತು ಚಿಕಿತ್ಸೆ ನೀಡುತ್ತಾರೆ, ಸಹಕರಿಸುತ್ತಾರೆ ಹಾಗೂ ಸರ್ಕಾರದಿಂದ ಎಚ್ಐವಿ ಬಾಧಿತರು ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು

ಡಾ ಶ್ವೇತಾ ನಡುವಿನಮನಿ ನೇತ್ರ ವೈದ್ಯಾಧಿಕಾರಿಗಳು ಹದಿಹರಿಯದ ಮಕ್ಕಳಲ್ಲಿ ಲೈಂಗಿಕ ದೌರ್ಜನ್ಯ ದಿಂದ ಯುವಕ ಯುವತಿಯರಲ್ಲಿ ಎಚ್ಐವಿ ಸೋಂಕು ಹರಡದಂತೆ ತಡೆಗಟ್ಟಲು ಪೋಷಕರು ಜಾಗೃತಿ ವಹಿಸಬೇಕೆಂದು ಮಾತನಾಡಿದರು.

ಡಾ.ಆಯೇಶಾ ವೈದ್ಯಾಧಿಕಾರಿಗಳು ಇವರು ಸಹ ಯುವಜನರಲ್ಲಿ ಎಚ್ಐವಿ ಪಿಡುಗು ಒಬ್ಬರಿಂದ ಒಬ್ಬರಿಗೆ ಹರಡದಂತೆ ತಡೆಗಟ್ಟಲು ಎಚ್ಐವಿ /ಏಡ್ಸ್ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬೇಕು ಲೈಂಗಿಕ ರೋಗಗಳ ಬಗ್ಗೆ ಚಿಕಿತ್ಸೆ ತೆಗೆದುಕೊಳ್ಳುವುದು ಹಾಗೂ ತಂದೆ ತಾಯಿಯಿಂದ ಮಕ್ಕಳಿಗೆ ಹೆಚ್ಐವಿ ಬಾರದಂತೆ ಇರವ ಕುರಿತಾಗಿ ಮಾಹಿತಿ ನೀಡಿದರು

ಡಾ. ರುದ್ರಮುನಿ ಗದ್ದಿ ಇವರು ಸಹ ಎಚ್ಐವಿ ಏಡ್ಸ್ ಬರೋದಕ್ಕಿಂತ ಮುಂಚೆ ಸ್ವಚ್ಛತೆ ಮತ್ತು ಜಾಗೃತರಾಗಿರೋಣ ಎಂದು ಮಾಹಿತಿ ನೀಡಿದರು ಶ್ರೀ ಅಲ್ಲಮ್ಮ ಪ್ರಭು ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಎಚ್ಐವಿ ಏಡ್ಸ್ ಬಗ್ಗೆ ಘೋಷಣೆ ,ಯೊಂದಿಗೆ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು




ವಿಶ್ವ ಏಡ್ಸ್ ದಿನಾಚರಣೆ ಜಾಗೃತಿಯ ಜಾಥವನ್ನು ಘೋಷಣೆ ಮೂಲಕ ತಾಲೂಕು ಸಾರ್ವಜನಿಕ ಆಸ್ಪತ್ರೆಯಿಂದ, ಹನುಮಾನ್ ಮಂದಿರ್, ಗಡಿಯಾರ ಚೌಕ್, ಯಮನೂರಪ್ಪ ದರ್ಗಾ ಮತ್ತು ಬಳಿಗಾರ ಓಣಿ ಮರಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೊನೆಗೊಳಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಸೆಂಟ್ ಲುಕ್ ಮೆಡಿಕಲ್ ಸೊಸೈಟಿ ಮತ್ತು ಹೊಸ ಬೆಳಕು ಸಂಸ್ಥೆ ಸಿಬ್ಬಂದಿಗಳು ಭಾಗವಹಿಸಿದ್ದರು,ಶ್ರೀ ಪ್ರಾಣೇಶ್ ಜೋಶಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಸರಕಾರಿ ನೌಕರರ ಸಂಘ ದ ಅಧ್ಯಕ್ಷ ಹಾಜಿಬಾಬು ಕಲ್ಯಾಣಿ ಶಿವಲೀಲಾ ಮೇಟಿ. ಪದ್ಮಾವತಿ ನಾಯಕ್. ವಸೀಂರೆಹಮಾನ್. ಶ್ರೀ ಸತೀಶ್ ದರ್ಶನಕರ್, ಶ್ರೀ ರವಿಬೆಳಿಗಾರ್, ಶ್ರೀ ಸಣ್ಣ ಉಪ್ಪಳಪ್ಪ, ಎ. ಆರ್. ಟಿ ಸಿಬ್ಬಂದಿಗಳಾದ ಶ್ರೀ ಮಹೇಶ್ ಗೌಡ,ಶ್ರೀ ಮತಿ ವಿಜಯಲಕ್ಷ್ಮಿ, ಶ್ರೀ ರವಿ ಎ ಆರ್ ಟಿ,ಶ್ರೀ ವೀರೇಶ್,ಶ್ರೀ ಮತಿ ಭವಾನಿ ಎನ್‌ಟಿಇಪಿ ಸಿಬ್ಬಂದಿಗಳಾದ ಶ್ರೀ ರವಿ ಹೂಗಾರ್, ಶ್ರೀ ಅಂಬರೀಶ್ ಎಲಿಗಾರ್ ಮತ್ತು ಮಹಾಂತೇಶ್ ಬ್ಯಾಳಿ.ಇಲಿಯಾಸ.ಸತ್ತಾರ ಪಾಶಾ. ಮತ್ತು ಆರೋಗ್ಯ ಇಲಾಖೆ ಎಲ್ಲಾ ಸಿಬ್ಬಂದಿಗಳು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಯು ಸದಸ್ಯರಾದ ಶಾಮೀದಸಾಬ.ಮರ್ತುಜಸಾಬ.ಬಾಬುಕರಡಿ. ಜಾವಿದ್.ಶಹಜಾದ ಸಲಿಂ.ವಿರುಪಾಕ್ಷಿ ವಾಸೀಮ್.ಅಮರೇಶ.ಇನ್ನಿತರರಿದ್ದರು.

# ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏಡ್ಸ್ ಜಾಗೃತಿ ಅಭಿಯಾನದ




❑ ನೈಜ್ಯ ದೆಸೆ ನ್ಯೂಸ್

ಮಾನವಿ ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏಡ್ಸ್ ಜಾಗೃತಿ **ಅಭಿಯಾನದ ಪ್ರಯುಕ್ತ ತಾಲ್ಲೂಕ ಆಸ್ಪತ್ರೆ ಮಾನ್ವಿಯ ಐ.ಸಿ.ಟಿ.ಸಿ. ಕೌನ್ಸಿಲರ್ ಆಗಿರುವ ಶ್ರೀ ರಾಜೇಶ್ವರಿ ಅವರು ಉದ್ಘಾಟಕರಾಗಿ ಆಗಮಿಸಿ ಏಡ್ಸ್ ಹರಡುವಿಕೆ, ಮುನ್ನೆಚ್ಚರಿಕೆ ಮತ್ತು ಪರಿಣಾಮಗಳ ಕುರಿತಾದ ಮಾಹಿತಿಯನ್ನು ಹಂಚಿಕೊಂಡರು.**

ಈ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲರಾದ ಜೆ.ಎಲ್. ಈರಣ್ಣ ಮಾತಾಡಿ ಏಡ್ಸ್ ಮತ್ತು ಕ್ಯಾನ್ಸರ್ ಸಮಾಜದ ಮಾರಕ ರೋಗಗಳು, ಇದರ ಮುನ್ನೆಚ್ಚರಿಕೆ ವಹಿಸಬೇಕೆಂದರು. ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್ ಸಂಚಾಲಕರಾ ಪ್ರಾಸ್ತಾವಿಕ ನುಡಿ ಸೈಯದ್ ಮುಜೀಬ್ ಅಹ್ಮದ್ ಮಾತಾಡಿ ಇತ್ತೀಚಿನ ದಿನಗಳಲ್ಲಿ ಏಡ್ಸ್ ಅತಿಹೆಚ್ಚು ಹರಡುತ್ತಿರುವುದು ಯುವಜನರಲ್ಲಿ ಆದ್ದರಿಂದ ಈ ಜಾಗೃತಿ ಕಾರ್ಯಕ್ರಮವು ಕಾಲೇಜಿನ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ ಎಂದರು.

ರೆಡ್ ರಿಬ್ಬನ್ ಕ್ಲಬ್ ಸಂಚಾಲಕರಾದ ಚಂದ್ರು ವಂದಿಸಿದರು. ಈ ಸಂಧರ್ಭದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಕಾಲೇಜಿನ ಸಂಸ್ಕೃತಿಕಾ ಸಂಚಾಲಕರಾದ ಚನ್ನಬಸವ, ವಿವಿಧ ವಿಭಾಗಗಳ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ದೇವದುರ್ಗ ಟು ಪುಣೆ ಬಸ್‌ಗೆ ಶಾಸಕಿ ಕರೆಮ್ಮ ನಾಯಕ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಡಿ.1-ತಾಲೂಕಿನ ಪ್ರತಿಯೊಂದು ಹಳ್ಳಿಗೂ ಸಾರಿಗೆ ಸೌಲಭ್ಯ ಒದಗಿಸುವ ದೃಷ್ಟಿಯಿಂದ ದೇವದುರ್ಗ ಘಟಕಕ್ಕೆ 20ಹೊಸ ಬಸ್‌ಗಳನ್ನು ನೀಡುವಂತೆ ಸಾರಿಗೆ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕಿ ಕರೆಮ್ಮ ಜಿ.ನಾಯಕ ಹೇಳಿದರು.ಪಟ್ಟಣದ ಬಸ್ ಡಿಪೋದಲ್ಲಿದೇವದುರ್ಗ-ಪುಣೆ ಬಸ್ ಸಂಚಾರಕ್ಕೆ ಚಾಲನೆ ನೀಡಿ ಭಾನುವಾರ ಮಾತನಾಡಿದರು.**



20ಹೊಸ ಜತೆಗೆ ಎರಡು ಸ್ಲೀಪರ್‌ಬಸ್ ನೀಡಲು ಮನವಿ ಮಾಡಿದ್ದೇನೆ. ಭಕ್ತರ ಒತ್ತಾಯದ ಮೇರೆಗೆ ಧರ್ಮಸ್ಥಳ, ಧಾರವಾಡ ಸೇರಿ ವಿವಿಧೆಡೆ ಹೊಸಮಾರ್ಗದಲ್ಲಿ ಬಸ್ ಬಿಡಲಾಗಿದೆ. ಮುಂದಿನ ದಿನಗಳಲ್ಲಿ ದೇವದುರ್ಗ ತಿರುಪತಿಗೆ ಬಸ್ ಸಂಚಾರ ಆರಂಭಿಸಲಾಗುವುದು.ಪುಣೆ, ಗೋವಾಗೆ ಬಂಜಾರ ಸಮುದಾಯದ ಜನರು ಹೆಚ್ಚಾಗಿ ಹೋಗುತ್ತಿದ್ದು ಬಸ್ ಇಲ್ಲದೆ ಅವರಿಗೆ ಸಮಸ್ಯೆಯಾಗಿತ್ತು. ಹೀಗಾಗಿ ದೇವದುರ್ಗ ಪುಣೆ ಬಸ್ ಸಂಚಾರ ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ತಾಲೂಕಿನ ಪ್ರತಿಯೊಂದು ಹಳ್ಳಿ,ತಾಂಡಾಕ್ಕೂಬಸ್ ಓಡಿಸಲಾಗುವುದು. ಹೀಗಾಗಿ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ವಿದ್ಯಾರ್ಥಿಗಳು, ರೈತರ ಅನುಕೂಲಕ್ಕಾಗಿ ಎಲ್ಲ ಹಳ್ಳಿಗೂ ಬಸ್ ಬಿಡಲಾಗುವುದು. ಜನರು ಸಾರಿಗೆ ನೌಕರರಿಗೆ ಸಹಕಾರ ನೀಡಿ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.ಡಿಪೋ ಮ್ಯಾನೇಜರ್ ರಾಮನಗೌಡ ಮಾತನಾಡಿ, ಶಕ್ತಿ ಯೋಜನೆಯಿಂದ ಪುಣೆಗೆ ಹೋಗುತ್ತಿದ್ದ ಬಸ್ ಸಂಚಾರ ಬಂದ್ ಮಾಡಲಾಗಿತ್ತು. ಪ್ರತಿಕಿಮೀ ಬಸ್ ಓಡಿಸಲು 40ರೂ. ಖರ್ಚು ಬರಲಿದೆ. ಆದರೆ ಈರೂಟ್‌ನಲ್ಲಿ 29-30ಸಂಗ್ರಹವಾಗಿ 10ರೂ. ಹೆಚ್ಚುವರಿ ಬೀಳುತ್ತಿತ್ತು. ಹೀಗಾಗಿ ಪುಣೆ ರೂಟ್ ಬಂದ್ ಮಾಡಲಾಗಿತ್ತು. ಧರ್ಮಸ್ಥಳ ರೂಟ್ 50ರೂ. ಆದಾಯ ತರುತ್ತಿದೆ. ಕೆಲವು ಕಡೆಲಾಭವಿಲ್ಲದಿದ್ದರೂ ರೂಟ್ ಪಾಲಿಸಲು ಬಸ್ ಓಡಿಸಲಾಗುತ್ತಿದೆ. ಜನರು ಸುರಕ್ಷಿತ ಪ್ರಯಾಣಕ್ಕೆ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಸಬೇಕು ಎಂದರು. ಜೆಡಿಎಸ್ ಮಾಜಿ ತಾಲೂಕು ಅಧ್ಯಕ್ಷ ಶರಣಪ್ಪ ಬಳೆ, ಪ್ರಮುಖರಾದ ದೊಡ್ಡರಂಗಣ್ಣ ಪಾಟೀಲ್ ಅಳ್ಳುಂಡಿ, ಶೀಖರೇಶ ಪಾಟೀಲ್, ಕೃಷ್ಣಪ್ಪ ನಾಯಕ, ಅಯ್ಯಣ್ಣ, ನಾಗರಾಜ ಪಾಟೀಲ್, ಮಹಾದೇವಪ್ಪಗೌಡ ಹಿರೇಬೂದೂರು, ಗೌರಿ ಜಿ.ನಾಯಕ ಇತರರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಎಚ್‌ಐವಿ ಹಾಗೂ ಏಡ್ಸ್ ವಿರುದ್ಧ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಅವಶ್ಯವಿದೆ :ಡಾಕ್ಟರ ಉಮೇಮಾ ಅಮೇರಾ. ವೈದ್ಯಾಧಿಕಾರಿಗಳು

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿಸೆಂಬರ್ 01: ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.ಜಿಲ್ಲಾ ಏಡ್ಸ್ ನಿಯಂತ್ರಣ ಸೊಸೈಟಿ ರಾಯಚೂರು ಸರ್ಕಾರಿ ಪದವಿ ಪೂರ್ವ ಕಾಲೇಜ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಜವಳಗೇರಾ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮವನ್ನು ವೈದ್ಯಾಧಿಕಾರಿಗಳಾದ ಉಮೇಮಾ ಅಮೇರಾ ಅವರು ಉದ್ಘಾಟನೆ ಮಾಡಿ ಮಾತನಾಡಿದರು ಎಚ್ಐವಿ ಮತ್ತು ಏಡ್ಸ್ ನಾಲ್ಕು ವಿಧಾನಗಳು ಮೂಲಕ ಮನುಷ್ಯನ ದೇಹವನ್ನು ಸೇರುತ್ತದೆ. ಎಚ್ಐವಿ ಪೀಡಿತ ತಾಯಿಯಿಂದ ಮಗುವಿಗೆ ಆ ಸುರಕ್ಷತಾ ರಕ್ತವನ್ನು ಪಡೆಯುವುದರಿಂದ ಅಸುರಕ್ಷಿತ ಲೈಂಗಿಕತೆಯಿಂದ ಅ ಸುರಕ್ಷಿತ ಸೂಜಿ ಮತ್ತು ಸಿರಂಜಿ ಬಳಸುವುದರಿಂದ ಬರುವ ಸಾಧ್ಯತೆ ಹೆಚ್ಚಿರುತ್ತದೆ .ಸೋಂಕು ಪೀಡಿತ ವ್ಯಕ್ತಿಯೊಂದಿಗೆ ಮಾತನಾಡುವುದು, ಜೊತೆ ಕೂತು ಊಟ ಮಾಡುವುದು, ಅವರೊಂದಿಗೆ ಬಟ್ಟೆ, ಹೊದಿಕೆಗಳನ್ನು ಹಂಚಿಕೊಳ್ಳುವುದರಿಂದ ಏಡ್ಸ್ ಬರುವುದಿಲ್ಲ. ಹಾಗಾಗಿ ಎಚ್ ಐ ವಿ ಏಡ್ಸ್ ಬಗ್ಗೆ ನೀವು ಅರಿಯಿರಿ, ನಿಮ್ಮ ನೆರೆಹೊರೆಯವರಿಗೂ ಜಾಗೃತಿ ಮೂಡಿಸಿ. ಸೋಂಕಿತ ವ್ಯಕ್ತಿಯನ್ನು ಗೌರವದಿಂದ ನೆಡೆಸಿಕೊಳ್ಳಬೇಕು. ಎಂದರು.




ನಂತರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಾತನಾಡಿದರು, ಎಚ್ಐವಿ ಒಂದು ಹ್ಯೂಮನ್ ಇಮ್ಯೂನ್ ವೈರಸ್ ಹೆಚ್ಚಾಗಿ ಅಸುರಕ್ಷಿತ ಲೈಂಗಿಕತೆಯಿಂದ ಹರಡುತ್ತದೆ ಇದು ಮನುಷ್ಯನ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಕುಂದಿಸುತ್ತಾ ಹೋಗುತ್ತದೆ ನಂತರದಲ್ಲಿ ಏಡ್ಸ್ ಎಂದು ಸ್ವಾಧೀನ ಪಡಿಸಿಕೊಂಡ ಇಮ್ಯೂನ್ ಡಿಫಿಷಿಯನ್ಸಿ ಸಿಂಡ್ರೋಮ್ ಆಗಿ ಪರಿವರ್ತನೆಯಾಗಿ ಅವಕಾಶವಾದಿ ಸೋಂಕುಗಳಿಗೆ ದಾರಿ ಮಾಡಿಕೊಡುತ್ತದೆ ಇದರಿಂದ ಮನುಷ್ಯನ ದೇಹ ಹೊಂದಿಸುತ್ತಾ ಹೋಗುತ್ತದೆ ಅದಕ್ಕಾಗಿ ತಾಲೂಕ ಆಸ್ಪತ್ರೆಯ ಎ. ಆರ್. ಟಿ. ಕೇಂದ್ರದಲ್ಲಿ.

ಆಪ್ತ ಸಮಾಲೋಚನೆ ನೆಡೆಸಿ ಮತ್ತು ದೇಹದ ಶಕ್ತಿಯನ್ನು ಹೆಚ್ಚಿಸುವಂತಹ ಚಿಕಿತ್ಸೆಯನ್ನು ನೀಡಲಾಗುತ್ತದೆ ಎ ಆರ್ ಟಿ ಚಿಕಿತ್ಸೆಯನ್ನು ನೀಡಲಾಗುತ್ತದೆ, ಅದಕ್ಕಾಗಿ ಎಚ್ಐವಿ ಮತ್ತು ಏಡ್ಸ್ ರೋಗಿಗಳಿಗೆ ಮಾನಸಿಕ ಧೈರ್ಯವನ್ನು ನೀಡಬೇಕು ಎಂದರು. ಈ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕರಾದ ಶಂಕರಪ್ಪ , ಸಾಬಣ್ಣ , ಶಾಹೀನ್ ಶಿಲ್ಪಾ ಮತ್ತು ಆರೋಗ್ಯ ನಿರೀಕ್ಷಣಾ ಅಧಿಕಾರಿಗಳಾದ ಮಹೇಶ ಮತ್ತು ಅಂಬಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಏಡ್ಸ್ ಕುರಿತು ಭಯಬೇಡ ಮುನ್ನೆಚ್ಚರಿಕೆ ಇರಲಿ: ಡಾ.ಹುಕ್ಕೇರಿ




❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಏಡ್ಸ್ ಎಂಬುದು ಒಂದು ಮಾರಣಾಂತಿಕ ಕಾಯಿಲೆಯಾಗಿದ್ದರೂ ಸುರಕ್ಷಿತ ಲೈಂಗಿಕ ಕ್ರಮಗಳನ್ನು ಅನುಸರಿಸುವುದರಿಂದ ಅದನ್ನು ನಿಯಂತ್ರಿಸಬಹುದು. ಈ ರೋಗದ ಕುರಿತು ಭಯಬೇಡ ಆದರೆ ಮುನ್ನೆಚ್ಚರಿಕೆ ಅಗತ್ಯವಾಗಿದೆ ಎಂದು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ ಹೇಳಿದರು.**

ಸೋಮವಾರ ಪಟ್ಟಣದಲ್ಲಿ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಬೆಂಗಳೂರು,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಹಾಗೂ ತಡೆಗಟ್ಟು ಘಟಕ ವಿಜಯಪುರ, ತಾಲೂಕ ಆರೋಗ್ಯ ಅಧಿಕಾರಿಗಳ ಕಚೇರಿ ಮುದ್ದೆಬಿಹಾಳ, ಎಸ್.ವಿ.ಎಂ. ಪ್ಯಾರಾಮೆಡಿಕಲ್ ಇನ್ಸ್ಟಿಟ್ಯೂಟ್ ಹಾಗೂ ಸಮುದಾಯ ಆರೋಗ್ಯ ಕೇಂದ್ರ ತಾಳಿಕೋಟಿ ಇವರ ಸಹಯೋಗದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷ ಡಿಸೆಂಬರ್ 1ರಂದು ವಿಶ್ವ ಏಡ್ಸ್ ದಿನದ ಆಚರಣೆಯನ್ನು ವಿಶ್ವ ಆರೋಗ್ಯ ಸಂಸ್ಥೆಯು 1988ರಿಂದ ಆರಂಭಿಸಿತು ಇದರ ಪ್ರಮುಖ ಉದ್ದೇಶ ಎಚ್.ಐ.ವಿ./ ಏಡ್ಸ್ ರೋಗದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಅದರ ಕುರಿತು ಇರುವ ತಪ್ಪು ಕಲ್ಪನೆಗಳನ್ನು ದೂರು ಮಾಡುವುದು ಹಾಗೂ ರೋಗಿಗಳಿಗೆ ಸಮಾಜದಲ್ಲಿ ಗೌರವ ದೊರಕಿಸುವಂತೆ ಮಾಡುವುದಾಗಿದೆ ಎಂದ ಅವರು ಇವತ್ತು ಇಂತಹ ನಿರಂತರ ಜಾಗೃತಿ ಕಾರ್ಯಕ್ರಮಗಳಿಂದ ಯುವಜನರಲ್ಲಿ ಆರೋಗ್ಯ ಪ್ರಜ್ಞೆ ಮೂಡಿದೆ. ಇಂದು ಅವರು ಸುರಕ್ಷಿತ ಲೈಂಗಿಕ ಕ್ರಿಯೆ ಅನುಸರಿಸುತ್ತಿರುವುದರಿಂದ ಎಚ್ಐವಿ ಸೋಂಕಿತರ ಪ್ರಮಾಣ ಕಡಿಮೆಯಾಗುತ್ತಿದೆ ಎಂದರು.

ಐಸಿಟಿಸಿ ಸಮಾಲೋಚಕಿ ಕಲ್ಪನಾ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿ ಎಚ್ಐವಿ ಸೋಂಕಿನ ನಿಯಂತ್ರಣ ಕ್ರಮಗಳು ಹಾಗೂ ಏಡ್ಸ್ ರೋಗದ ಬಗ್ಗೆ ಸಾರ್ವಜನಿಕರಲ್ಲಿ ಇರುವ ತಪ್ಪು ಕಲ್ಪನೆಗಳ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ,ಎನ್.ಜಿ.ಓ. ವರ್ಕರ್ಸ್, ತಾಳಿಕೋಟಿ ಎಸ್‌ವಿಎಮ್ ಪ್ಯಾರಾ ಮೆಡಿಕಲ್ ಇನ್ಸ್ಟಿಟ್ಯೂಟ್ ವಿದ್ಯಾರ್ಥಿಗಳು ಹಾಗೂ ಆಶಾ ಕಾರ್ಯಕರ್ತೆಯರು ಇದ್ದರು. ವಿದ್ಯಾರ್ಥಿಗಳ ಜಾಗೃತಿ ಜಾಥಾ: ವೇದಿಕೆ ಕಾರ್ಯಕ್ರಮ ಮುನ್ನ ಎಸ್.ವಿ.ಎಂ. ಪ್ಯಾರಾ ಮೆಡಿಕಲ್ ಇನ್ಸ್ಟಿಟ್ಯೂಟ್ ವಿದ್ಯಾರ್ಥಿಗಳಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿಶ್ವ ಏಡ್ಸ್ ದಿನದ ಕುರಿತು ಜಾಥಾದ ಮೂಲಕ ಸಾರ್ವಜನಿಕರಲ್ಲಿ ಜನಜಾಗೃತಿಯನ್ನು ಮೂಡಿಸಲಾಯಿತು.

# ಗೋನವಾರ ಗ್ರಾಮ ಪಂಚಾಯತ ಕಟ್ಟಡ ಉದ್ಘಾಟಿಸಿದ ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಮೀಪದ ಗೋನವಾರ, ಗ್ರಾಮ ಪಂಚಾಯತ ನೂತನ ಕಟ್ಟಡ ಉದ್ಘಾಟನೆ ಹಾಗೂ ವಯೋನಿವೃತ್ತಿ ಹೊಂದಿದ ಶ್ರೀ ರಾಮಣ್ಣ ವಾಟರ್‌ಮ್ಯಾನ್ ಇವರ ಬೀಳ್ಕೊಡುಗೆ ಸಮಾರಂಭ ವನ್ನು ದೀಪ ಬೆಳಗಿಸಿದರೆ ಮೂಲಕ ಶಾಸಕ ಹಂಪನಗೌಡ ಬಾದರ್ಲಿ ಅವರು ಉದ್ಘಾಟನೆಯನ್ನು ಮಾಡಿದರು.**

ನಂತರ ಮಾತನಾಡಿದ ಶ್ರೀ ಹಂಪನಗೌಡ ಬಾದರ್ಲಿ ಶಾಸಕರು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯ ಬಹಳ ಪ್ರಮುಖವಾದ ಕೆಲಸ ಜಿಲ್ಲಾ ಪಂಚಾಯತಿ ಸದಸ್ಯನಾಗಿ ನಾನು 5 ಬಾರಿ ಶಾಸಕನಾಗಿ ಆಯ್ಕೆ ಯಾಗಿದ್ದೀನಿ ...ಯಾರು ಉತ್ತಮವಾಗಿ ಕೆಲಸಗಳನ್ನು ಮಾಡಿ ಕಾರ್ಯಗಳನ್ನು ಮಾಡಿ ಜನರ ಪ್ರೀತಿ ವಿಶ್ವಾಸ ಗಳಿಸುತ್ತಾರೋ ಅಂತವರಿಗೆ ಒಂದು ದೊಡ್ಡ ಸ್ಥಾನ ಸಿಕ್ಕೆ ಸಿಗುತ್ತದೆ... ನಮ್ಮ ದೇಶದಲ್ಲಿ ಶೇಕಡ 80% ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ ರೈತ ಕುಟುಂಬಗಳು 20% ಜನ ಮಾತ್ರ ಪಟ್ಟಣ ಹಾಗೂ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ.




ಗ್ರಾಮೀಣ ಪ್ರದೇಶದಲ್ಲಿ ಶೇಕಡ 80 ವಾಸ ಮಾಡುತ್ತಿರುವ ಜನರಿಗೆ ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಮೂಲಭೂತ ಸೌಕರ್ಯವನ್ನು ಕೊಡುವ ಅಧಿಕಾರ ಗ್ರಾಮ ಪಂಚಾಯಿತಿ ಗಳಿಗೆ ಕೊಟ್ಟಿದ್ದಾರೆ... ಗ್ರಾಮ ಪಂಚಾಯಿತಿ ಸದಸ್ಯರಾಗಲಿ ಅಧ್ಯಕ್ಷರಾಗಲಿ ಗ್ರಾಮ ಪಂಚಾಯಿತಿಗಳ ಬಗ್ಗೆ ಸರಿಯಾದ ಕಳಕಳಿಯನ್ನು ಇಟ್ಟುಕೊಂಡು ಸರಿಯಾದ ಕೆಲಸವನ್ನು ಮಾಡಬೇಕು ಎಂದು ತಿಳಿಸಿದರು.. ಕೆಲವು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದೋರು ಮತ್ತು ಜಿಲ್ಲಾ ಪಂಚಾಯತಿ ಅಧ್ಯಕ್ಷರಾದವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಾಸಕರಿಗಿಂತಲೂ ಹೆಚ್ಚು ಕೆಲಸ ಮಾಡಿದ ಉದಾಹರಣೆಗಳಿವೆ.ಗ್ರಾಮ ಪಂಚಾಯತಿ ಸದಸ್ಯರಾದವರು ಇದು ನಮ್ಮ ಕೆಲಸ ನಮ್ಮ ಮನೆಯ ಕೆಲಸ ಜನಸಾಮಾನ್ಯರಿಗೆ ನಾವು ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡಬೇಕಾದ ಚಿಂತನೆ ಮಾಡುವಂತಹ ವ್ಯವಸ್ಥೆ ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರಬೇಕಾದಂತಹ ಅವಶ್ಯಕತೆ ಬಾಹಳ ಇದೆ ... ಇವತ್ತಿನ ದಿನಮಾನಗಳಲ್ಲಿ ಸ್ವಾಭಾವಿಕವಾಗಿ ಜನರ ಬೇಡಿಕೆಗಳು ಬಹಳವಾಗಿರುತ್ತವೆ.

ಆದರೆ ರಾಜಕೀಯವಾಗಿ ಸರ್ಕಾರದಿಂದ ಬಂದಂತಹ ಅನುದಾನವನ್ನ ಸಂಪೂರ್ಣವಾಗಿ.. ಅನುದಾನವನ್ನ ಜನಸಾಮಾನ್ಯರಿಗೆ ತಿಳುವಳಿಕೆ ಮೂಡುವಂತಹ ಕೆಲಸವಾಗಬೇಕು.. ಎಲ್ಲಿಯವರೆಗೂ ಜನರಿಗೆ ಇದು ಪಂಚಾಯಿತಿ ವ್ಯಾಪ್ತಿಯಲ್ಲಿ .. ಇದು ಪಂಚಾಯಿತಿ ನಮ್ಮದು ನಾವು ಮಾಡುವಂತಹ ಕೆಲಸಗಳನ್ನು ಪ್ರಮಾಣಿಕವಾಗಿ ಮಾಡಬೇಕು ಆಮೇಲೆ ಆ ಗ್ರಾಮಗಳ ಬೇಡಿಕೆಗೆ ಅನುಸಾರವಾಗಿ ಕೆಲಸಗಳನ್ನು ಕೈಗೆತ್ತಿಕೊಂಡು ಮಾಡುವಂತ ಸಂದರ್ಭದಲ್ಲಿ ಯಾವುದೇ ಸಮಸ್ಯೆಗಳು ಬರುವುದಿಲ್ಲವೆಂದು ತಿಳಿಸಿದರು... ನಂತರ ಈ ಕಾರ್ಯಕ್ರಮದಲ್ಲಿ ನಿವೃತ್ತಿ ಹೊಂದಿದ ವ್ಯಾಕರ್ ಮ್ಯಾನ್ ರಾಮಣ್ಣ ಅವರಿಗೆ ಸನ್ಮಾನಿಸಿ ಬಿಳ್ಕೊಡಲಾಯಿತು.

ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿದ ಗಬುರ್ ಸಾಬ್ ಗೋನವಾರ್ ಅಬ್ಬಾಸಲ್ಲಿ ಮಠ , ಖಾಜಿ ಮಲಿಕ್ ವಕೀಲರು ಸಿಂಧನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಪಿ ಗಂ ಪಂಪಾಪತಿ ನಾಯಕ ,ಶ್ರೀಮತಿ ನರಸಮ್ಮ ಗಂ ಹನುಮಂತಪ್ಪ ಹೊಸಮನಿ, ಉಪಾಧ್ಯಕ್ಷರು, ಶ್ರೀಮತಿ ಶ್ರೀದೇವಿ ಗಂ ಮಲ್ಲಯ್ಯ ಮ್ಯಾಕಲ ಸದಸ್ಯರು, ಶ್ರೀ ನಾಗರೆಡ್ಡಿ ತಂ ಶರಣಪ್ಪ ಸದಸ್ಯರು, ಶ್ರೀ ನಾಗಯ್ಯ ತಂ ರಂಗಯ್ಯ ಬುಳ್ಳಿ, ಸದಸ್ಯರು, ಶ್ರೀಮತಿ ರಂಗಮ್ಮ ಗಂ ದೊಡ್ಡ ಹುಸೇನಪ್ಪ, ಸದಸ್ಯರು, ಶ್ರೀಮತಿ ದುರುಗಮ್ಮ ಗಂ ಸಣ್ಣ ದೇವೇಂದ್ರಪ್ಪ ಸದಸ್ಯರು, ಶ್ರೀ ರಾಮನಗೌಡ ತಂ ನಾರಾಯಣಪ್ಪ ಸದಸ್ಯರು, ಶ್ರೀಮತಿ ಹನುಮವ್ವ ಗಂ ಅಯ್ಯನಗೌಡ ಪೊಲೀಸ್ ಪಾಟೀಲ್ ಸದಸ್ಯರು , ಶ್ರೀಮತಿ ಮಹಾದೇವಿ ಗಂ ಸಣ್ಣ ಬಸವರಾಜ ಸದಸ್ಯರು , ಶ್ರೀಮತಿ ಯಲ್ಲಮ್ಮ ಗಂ ಭೀಮರಾಯಪ್ಪ ಸದಸ್ಯರು, ಶ್ರೀಮತಿ ನಿಂಗಮ್ಮ ಗಂ ರಾಮ ಸದಸ್ಯರು, ಶ್ರೀ ಹನುಮಂತ ತಂ ನಿಂಗಯ್ಯ ಸದಸ್ಯರು, ಶ್ರೀ ಶಿವರಾಜ ತಂ ಈರಪ್ಪ ಸದಸ್ಯರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಯ್ಯಣ್ಣ ಗದ್ದಿ ಸರ್ವ ಸಿಬ್ಬಂದಿ ವರ್ಗ ಗ್ರಾಮ ಪಂಚಾಯತ್, ಗೋನವಾರ ... ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ


MRPL ನೇಮಕಾತಿ 2025 ವಿವಿಧ ಪದವೀಧರ/ ತಂತ್ರಜ್ಞ ಅಪ್ರೆಂಟಿಸ್ ತರಬೇತಿ ಹುದ್ದೆಗಳಿಗೆ ವಾಕ್-ಇನ್ ಸಂದರ್ಶನ MRPL ನೇಮಕಾತಿ 2025: ವಿವಿಧ ಪದವೀಧರ/ ತಂತ್ರಜ್ಞ ಅಪ್ರೆಂಟಿಸ್ ತರಬೇತಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ನವೆಂಬರ್ 2025 ರ MRPL ಅಧಿಕೃತ ಅಧಿಸೂಚನೆಯ ಮೂಲಕ ಪದವೀಧರ/ ತಂತ್ರಜ್ಞ ಅಪ್ರೆಂಟಿಸ್ ತರಬೇತಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05-ಡಿಸೆಂಬರ್-2025 ರಂದು ವಾಕ್-ಇನ್-ಸಂದರ್ಶನಕ್ಕೆ ಹಾಜರಾಗಬಹುದು. ಪದವೀಧರ ಅಪ್ರೆಂಟಿಸ್ ಟ್ರೈನಿ ಬಿಇ/ ಬಿ.ಟೆಕ್, ತಂತ್ರಜ್ಞ(ಡಿಪ್ಲೊಮಾ) ಅಪ್ರೆಂಟಿಸ್ ಟ್ರೈನಿ ಡಿಪ್ಲೊಮಾ - https://nats.education.gov.in/ Official Website: mrpl.co.in 05-ಡಿಸೆಂಬರ್-2025

# ಸಾಮಾಜಿಕ ಸಮಾನತೆಯ ಹರಿಕಾರ: ಬೋಸರಾಜು

❑ ನೈಜ್ಯ ದೆಸೆ ನ್ಯೂಸ್

ಕವಿತಾಳ: ಕನಕದಾಸರ ಸಮಾನತೆಯ ಸಂದೇಶ ಹಾಗೂ ಜಾತಿ ವಿರುದ್ಧದ ಹೋರಾಟ ಪ್ರೇರಣೆಯಾಗಬೇಕು ಅವರ ಕೀರ್ತನೆಗಳು ಸಮಾಜದ ಬದಲಾವಣೆಗೆ ದಾರಿದೀಪವಾಗಿವೆ. ಮೌಢ್ಯತೆ, ಅಜ್ಞಾನ, ಅಸ್ಪೃಶ್ಯತೆ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದ್ದರು. ಬುದ್ಧ, ಬಸವಣ್ಣ, ಕನಕದಾಸರು ಜಾತಿ ವ್ಯವಸ್ಥೆ ಹೋಗಲಾಡಿಸಲು ಜನಜಾಗೃತಿ ನಡೆಸಿದ್ದಾರೆ. ಇದು ಯುವ ಸಮುದಾಯಕ್ಕೆ ಮಾರ್ಗದರ್ಶನವಾಗಬೇಕು. ಯುವಕರು ಜಾಗೃತರಾಗಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು' ಎಂದು ಸಣ್ಣ ನೀರಾವರಿ, ವಿಜ್ಞಾನ & ತಂತ್ರಜ್ಞಾನ ಸಚಿವರು ಎನ್.ಎಸ್ ಬೋಸರಾಜು ಹೇಳಿದರು.

ಅವರು ಇಂದು ಪಟ್ಟಣದ ಕನಕನಗರದಲ್ಲಿ ಹಮ್ಮಿಕೊಂಡಿದ್ದ ಕನಕದಾಸರ 538ನೇ ಜಯಂತೋತ್ಸವ ಮತ್ತು ಕನಕದಾಸರ ಮೂರ್ತಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. 'ಪಟ್ಟಣದ ಶಿವಪ್ಪ ತಾತನ ಮಠ ದೇವಸ್ಥಾನಕ್ಕೆ ರಸ್ತೆ ಅಗಲೀಕರಣದಿಂದ ತೆರವು ಮಾಡಲಾಗಿದ್ದು ಶಾಸಕರ ಅನುಧಾನದಲ್ಲಿ ಕಟ್ಟಡ ನಿರ್ಮಾಣ ಹಾಗೂ ಶಿವಪ್ಪ ಮಠದ ಅಭಿವೃದ್ಧಿಗೆ 50 ಲಕ್ಷ ರೂ.ಗಳು ಮೀಸಲಿಡಲಾಗಿದೆ. ಸಾಮಾಜಿ-



ಕ ಹಾಗೂ ಧಾರ್ಮಿಕ ಸಾಮರಸ್ಯ ಬೆಳೆಸಲು ಶ್ರಮಿಸಿದ ಮಹಾನ ಪುರುಷ ಕನಕದಾಸರು.

ಎಲ್ಲ ಶರಣರು, ಸಂತರು, ಮಹಾನ್ ನಾಯಕರುಗಳು ಹುಟ್ಟು ಜಾತಿ ಪರಿಗಣಿಸದೆ ತಮ್ಮದೆ ಆದ ಮನುಕುಲ ಸನ್ಮಾರ್ಗದಲ್ಲಿ ನಡೆಯಲು ನೀಡಿದ ತತ್ವಾದರ್ಶಗಳು ಎಂದೆಂದಿಗೂ ನಮಗೆ ದಾರಿದೀಪ 'ಎಂದರು. ಮಾಜಿ ಸಚಿವ ಕೆ.ಶಿವನಗೌಡ ನಾಯಕ ಮಾತನಾಡಿ '16ನೇ ಶತಮಾನದ ಸಂತ ಕವಿ ಕನಕದಾಸರು, ತಮ್ಮ ಕೀರ್ತನೆ, ಕಾವ್ಯಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಕೆಳವರ್ಗದಲ್ಲಿ ಜನಿಸಿದರೂ, ತಮ್ಮ ಭಕ್ತಿ ಜ್ಞಾನ ದಿಂದ ಜಾತಿ ವ್ಯವಸ್ಥೆ ವಿರುದ್ಧ ಧ್ವನಿಯೆತ್ತಿ, ಸಾಮಾಜಿಕ ಮೌಲ್ಯ ಸಾರಿದ ದಾಸಶ್ರೇಷ್ಠರಾಗಿದ್ದಾರೆ. ಸಿದ್ದರಾಮಯ್ಯ ಅವರು ಕೇವಲ ಕುರುಬ ಸಮಾಜದ ನಾಯಕಲ್ಲ. ಶೋಷಿತ ವರ್ಗದ ನಾಯಕರಾಗಿದ್ದಾರೆ. ಸಿದ್ದರಾಮಯ್ಯ ಅವರ ಮೇಲೆ ಅಪಾರವಾದ ಗೌರವವಿದೆ. ಈ ನಾಡು ಕಂಡ ಶ್ರೇಷ್ಠ ನಾಯಕ'ಎಂದು ಹೇಳಿದರು.

'ಕುಲಕುಲ ವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂದು ಹೇಳಿ ಮನುಷ್ಯರೆಲ್ಲರೂ ಒಂದೇ ಎಂದು ಸಾರಿದರು. ತಮ್ಮ ಕೀರ್ತನೆ, ಹಾಡುಗಳ ಮೂಲಕ ಈ ಸಂದೇಶವನ್ನು ತಿಳಿಸಿದವರು' ಎಂದು ನಿರುಪಾದೇಪ್ಪ ವಕೀಲರು ಹೇಳಿದರು. ಶಾಸಕ ಜಿ.ಹಂಪಯ್ಯ ನಾಯಕ ಮಾತನಾಡಿ 'ಜಾತಿ ಮತ ಕುಲಗಳ ಭೇದ ಭಾವವನ್ನು ಮೀರಿಸುವಂತೆ ಸಮಾಜದ ಪಿಡುಗುಗಳ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿ ಸಾಮಾಜಿ-ಕ ಕ್ರಾಂತಿಯನ್ನೇ ಮಾಡಿದ ಸಂತವರೇಣ್ಯರು ಕನಕದಾಸರು' ಎಂದು ತಿಳಿಸಿದರು.

ಮಾಜಿ ಸಂಸದರು ಕೆ.ವಿರುಪಾಕ್ಷಪ್ಪ, ಎಂ ಈರಣ್ಣ ಇನ್ನಿತರರು ಮಾತನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶಿವರಾಜ ಡೊಣಮರಡು ಮಾಡಿದರು. ಕಾರ್ಯಕ್ರಮದ ಸಾನಿದ್ಯವನ್ನು ಬೀರಲಿಂಗೇಶ್ವರ ಸ್ವಾಮೀಜಿ ಕಾಗಿನೆಲೆ ಪೀಠ, ಕರಿಯಪ್ಪ ತಾತ, ಶಿವಪ್ಪ ತಾತ, ನಾಗಯ್ಯಗುರುವಿನ, ಸದಾಶಿವ ತಾತ ಮುಂಡರಗಿರವರು ವಹಿಸಿದ್ದರು. ವೇದಿಕೆ ಮೇಲೆ ಕೆ. ಬಸವಂತಪ್ಪ, ಶರಣಯ್ಯ ಗುಡದಿನ್ನಿ, ಬಿಕೆ ಅಮರೇಶಪ್ಪ ವಕೀಲರು, ಬಸವರಾಜ ಡೋಣಮರಡಿ, ಕಿರಿಲಿಂಗಪ್ಪ, ಮಾಳಪ್ಪ ತೋಳದ್, ಶಿವಣ್ಣ ವಕೀಲರು, ಯುಮನಪ್ಪ ದಿನ್ನಿ, ಪಟ್ಟಣಪ ಪಂಚಾಯತಿ ಮಾಜಿ ಸದಸ್ಯರಾದ ಗಂಗಪ್ಪ ದಿನ್ನಿ,ಮೌನೇಶ ಪೂಜಾರಿ, ಕರೀಂ ಸಾಬ್, ಭೀಮಣ್ಣ ನಾಯಕ ಕಾಚಪೂರು, ಮಲ್ಲಯ್ಯ ಅಂಬಾಡಿ, ಮಲ್ಲಿಕಾರ್ಜುನ ಜಕ್ಕಲದಿನ್ನಿ, ಚಾಂದಪಾಶ, ಕ-ರಿಯಪ್ಪ ಯಕ್ಲಾಸ್‌ಪುರು, ಸೇರಿದಂತೆ ಅನೇಕ ಸಮಾಜದ ಯುವಕರು, ಬಂಧುಗಳು ಇದ್ದರು.

## ಟಿಪ್ಪುಸುಲ್ತಾನ್ ಜನ್ಮದಿನ ಮತ್ತು ದ ಮೌಲಾನ್ ಆಜಾದ ರವರ ಜನ್ಮದಿನ ಹಾಗೂ ರಾಜ್ಯೋತ್ಸವ ಅಂಗವಾಗಿ ಉಚಿತ ಆರೋಗ್ಯ ಶಿಬಿರ

❑ ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರು: ಡಿ.01- ಇಂದು ಲಿಂಗಸುಗೂರು ವಿಧಾನಸಭಾ ಕ್ಷೇತ್ರದಲ್ಲಿಹಜರತ್ ಟಿಪ್ಪುಸುಲ್ತಾನ್ ಜನ್ಮದಿನ ಮತ್ತು ದೇಶದ ಮೊದಲ ಶಿಕ್ಷಣ ಮಂತ್ರಿ ಮೌಲಾನ್ ಆಜಾದ ರವರ ಜನ್ಮದಿನ ಹಾಗೂ 2025ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಸಪ್ತಗಿರಿ ಆಸ್ಪತ್ರೆ ಬೆಂಗಳೂರು ವೈದ್ಯರ ತಂಡದ ಸಯೋಗದಲ್ಲಿ ಆಯೋಜಿಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ವಿಧಾನ ಪರಿಷತ್ ಸದಸ್ಯರಾದ ಶರ-ಣಗೌಡ ಪಾಟೀಲ್ ಬಯ್ಯಾಪುರ ಉದ್ಘಾಟಿಸಿದರು.



ಈ ಸಂದರ್ಭದಲ್ಲಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷರಾದ ಭೂಪನಗೌಡ ಪಾಟೀಲ್ ಕರಡಕಲ್, ಜಿಲ್ಲಾ ಗ್ಯಾರಂಟಿ ಅಧ್ಯಕ್ಷರಾದ ಪಾಮಯ್ಯ ಮುರಾರಿ, ಹಿರಿಯ ನಾಯಕರು ಹಾಗೂ ಕಮಿಟಿಯ ಸದಸ್ಯರು ಉಪಸ್ಥಿತರಿದ್ದರು.

# ಪ್ರಾಧ್ಯಾಪಕ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಪಿಎಚ್‌ಡಿ ಪದವಿ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಮಾನ್ವಿ ಪಟ್ಟಣದ ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಉತ್ತರ ಪ್ರದೇಶದ ಅಲಿಗಢ್ ನಲ್ಲಿರುವ ಮಂಗಲಯಾತನ ವಿಶ್ವವಿದ್ಯಾಲಯ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಪಿಎಚ್‌ಡಿ ಪದವಿ ನೀಡಿದೆ.

ಸೈಯದ್ ಮಿನ್ಹಾಜ್ ಉಲ್ ಹಸನ್ ಅವರು ಡಾ. ಮೀನಾ ಚೌಧರಿ ಮತ್ತು ಡಾ. ಜಾವೇದ್ ವಸೀಮ್ ಅವರ ಮಾರ್ಗದರ್ಶನದಲ್ಲಿ 'ಭಾರತೀಯ ಐಟಿ ಉದ್ಯಮಕ್ಕೆ ಸಂಬಂಧಿಸಿದಂತೆ ಕ್ಲೌಡ್ ಪ್ಲಾಟ್‌ಫಾರ್ಮ್‌ಗಳಲ್ಲಿ ಸೈಬರ್ ಭದ್ರತಾ ಅಪಾಯಗಳ ತಡೆಗೆ ಕೃತಕ ಬುದ್ಧಿಮತ್ತೆ('Artificial Intelligence in cyber security risk on cloud platforms with



reference to Indian IT industry)' ಎಂಬ ವಿಷಯದ ಕುರಿತು ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಿದ್ದರು. ಈ ಕುರಿತು ನ.27ರಂದು ಮಂಗಲಯಾತನ ವಿಶ್ವವಿದ್ಯಾಲಯ ಪ್ರಮಾಣ ಪತ್ರ ನೀಡಿದ್ದು, ಮುಂಬರುವ ಘಟಿಕೋತ್ಸವದಲ್ಲಿ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಭಿನಂದನೆ: ಪಿಎಚ್‌ಡಿ ಪದವಿಯನ್ನು ಯಶಸ್ವಿಯಾಗಿ ಪೂರೈಸಿ ಡಾಕ್ಟರೇಟ್ ಗೌರವಕ್ಕೆ ಪಾತ್ರರಾಗಿರುವ ಸಹ ಪ್ರಾಧ್ಯಾಪಕ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರನ್ನು ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎಲ್.ಈರಣ್ಣ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

# 1000 ಎಸ್ಸಿ ಎಸ್ಟಿ ಮತ್ತು ಬಿಸಿಎಂ ವಸತಿನಿಲಯಗಳನ್ನು ಘೋಷಿಸಿ KSN

❑ ನೈಜ್ಯ ದೆಸೆ ನ್ಯೂಸ್

ಬಿಸಿಎಂ ವಸತಿನಿಲಯಗಳ ಅರ್ಜಿ ಹಾಗೂ ಸೀಟುಗಳ ಕೊರತೆಯಿಂದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಸಂಕಷ್ಟದ ವಿಷಯವು ಮಾಧ್ಯಮಗಳ ಮೂಲಕ ಮಾನ್ಯ ಮುಖ್ಯ ಮಂತ್ರಿ ಯವರಿಗೆ ತಿಳಿದು ಬಂದಿದೆ ಎಂದು ನಾನು ಭಾವಿಸಿರುವೆ.

ನಿಮ್ಮ ಐದು ಗ್ಯಾರೆಂಟಿಗಳ ಜೊತೆಗೆ, ನಾಡಿನ ಭವಿಷ್ಯವಾಗಿರುವ ವಿದ್ಯಾರ್ಥಿಗಳ ಹಿತಕ್ಕಾಗಿ?ಅವರ ಭವ್ಯ ಬದುಕಿಗೆ ಬೆಳಕಾಗುವಂತೆ,



ಬಡತನದ ಬೇಗೆಯಲ್ಲಿ ಬೇಯುತ್ತಿರುವ ವಿದ್ಯಾರ್ಥಿಗಳಿಗೆ ನಿಮ್ಮ ಭರವಸೆಯ ಮತ್ತೊಂದು ಗ್ಯಾರೆಂಟಿಯ ಅಗತ್ಯವಿದೆ..! ತಾವು ಈ ಚಳಿಗಾಲದ ಅಧಿವೇಶನದಲ್ಲೇ ಬೇಡಿಕೆಗೆ ಅನುಗುಣವಾಗಿ, ರಾಜ್ಯದಾದಂತ ಜಿಲ್ಲಾವಾರು ಹೆಚ್ಚುವರಿ ಒಂದು ಸಾವಿರ (1000) ಎಸ್ಸಿ?ಎಸ್ಟಿ ಮತ್ತು ಬಿಸಿಎಂ ವಸತಿನಿಲಯಗಳನ್ನು ಸ್ಥಾಪನೆಯನ್ನು ಘೋಷಿಸಿ ನೊಂದವರ, ಬಡವರ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಅಭಿವೃದ್ಧಿ ಪರ ನಾಯಕನೆಂದು ನಾಡಿಗೆ ಮತ್ತೊಮ್ಮೆ ನಿರೂಪಿಸಬೇಕೆಂದು ವಿನಂತಿಸುತ್ತೇನೆ.

ಮನೆಯಲ್ಲೇ ತುತ್ತಿನ ಅನ್ನಕ್ಕೂ ಕೊರತೆಯಿರುವ ಅನೇಕ ಮಕ್ಕಳು ಶಿಕ್ಷಣಕ್ಕಾಗಿ ವಸತಿನಿಲಯಗಳನ್ನು ಆಶ್ರಯತಾಣವೆಂದು ನಂಬಿಕೊಂಡಿದ್ದಾರೆ? ಈ ಸತ್ಯವನ್ನು ತಾವು ಮತ್ತೊಮ್ಮೆ ಮನನ ಮಾಡಿಕೊಂಡು, ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಧೈರ್ಯದ ನಿರ್ಧಾರ ಕೈಗೊಳ್ಳಬೇಕಾಗಿ ವಿನಯಪೂರ್ವಕ ಮನವಿ.ಬಡ ಮಕ್ಕಳ ಪಾಲಕರ ಸ್ಥಾನದಲ್ಲಿ ನಿಂತು, ತಮ್ಮಲ್ಲಿ ಕೈ ಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ.

## ನಿರ್ಮಲ ತುಂಗಭದ್ರಾ ಅಭಿಯಾನಕ್ಕೆ ಕಂಪ್ಲಿ ಶಾಸಕ ಗಣೇಶ್: ಬೆಂಬಲ

❑ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ನಿರ್ಮಲ ತುಂಗಭದ್ರಾ ಅಭಿಯಾನದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಕಂಪ್ಲಿ ಶಾಸಕ ಟಿ. ಎನ್. ಗಣೇಶ್ ಅವರು, "ನಾನು ವಿಶ್ವ ಪರಿಸರ ದಿನದಂದು ಹುಟ್ಟಿದ್ದೇನೆ. ನನಗೆ ಪರಿಸರದ ಬಗ್ಗೆ ತುಂಬಾ ಕಾಳಜಿ ಇದೆ. ತುಂಗಭದ್ರಾ ಶುದ್ಧೀಕರಣಕ್ಕಾಗಿ ನಡೆಯುತ್ತಿರುವ ಈ ಅಭಿಯಾನಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇನೆ" ಎಂದರು.




ಕಾರ್ಯಕ್ರಮದಲ್ಲಿ ಹೇಮಯ್ಯ ಸ್ವಾಮಿ, ಮಾದವರೆಡ್ಡಿ, ಡಾ. ಬಟ್ಟ ರಾಮಾಂಜನೇಯಲು, ಎ.ಸಿ. ದಾನಪ್ಪ, ಪ್ರಕಾಶ ವಕೀಲರು, ಕೆ. ಷಣ್ಮುಖಪ್ಪ, ವೀರಯ್ಯ ಹಿರೇಮಠ, ಬಾಲಕೃಷ್ಣ ನಾಯ್ಡು, ಟಿ.ಎನ್. ಮಾದವನ್, ಡಾ. ಶಿವಕುಮಾರ್

## ಮೊಟ್ಟಮೊದಲ ಬಾರಿಗೆ ತಾಲೂಕಿಗೆ ಸರ್ಕಾರದಿಂದ 11 ಪಬ್ಲಿಕ್ ಶಾಲೆಗಳು ಮಂಜೂರು: ಶಾಸಕ ಹಂಪನಗೌಡ

❑ ನೈಜ್ಯ ದೆಸೆ ನ್ಯೂಸ್

ಅಲಬನೂರು, ದಿದ್ದಿಗಿ, ಜಾಲಿಹಾಳ, ಪಗಡದಿನ್ನಿ, ಬಾದರ್ಲಿ, ಮಾಡಸಿರವಾರ, ರೌಡಕುಂದ, ಮುಕ್ಕುಂದ, ಜವಳಗೇರಾ, ಆಯನೂರು, ಸಾಲಗುಂದ, ಗ್ರಾಮಗಳಿಗೆ ಸಿಂಧನೂರು ತಾಲೂಕಿನ ಇತಿಹಾಸದಲ್ಲಿ ಸರ್ಕಾರ ಮೊಟ್ಟಮೊದಲ ಬಾರಿಗೆ 11 ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ನೂತನವಾಗಿ ಪ್ರಾರಂಭವಾದ ಶಾಸಕರ ಕಚೇ-ರಿಯಲ್ಲಿ ಇಂದು ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಮ್ಮ ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಅಭಿವೃದ್ಧಿಗಾಗಿ



ಸರ್ಕಾರ ಪ್ರತಿವರ್ಷ 15 ಕೋಟಿ ಅನುದಾನ ನೀಡುತ್ತಿದೆ. ಸಿಂಧನೂರು ತಾಲೂಕಿಗೆ ಈ ವರ್ಷ 6 ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು. 1 ನೇ ತರಗತಿಯಿಂದ 12ನೇ ತರಗತಿಯವರೆಗೆ ಶಿಕ್ಷಣ ನೀಡುವ ಪಬ್ಲಿಕ್ ಶಾಲೆಯಲ್ಲಿ ಒಟ್ಟು 12 ಸಾವಿರ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಒಂದೇ ಸೂರಿನ ಅಡಿಯಲ್ಲಿ ಪಬ್ಲಿಕ್ ಶಾಲೆಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಒಂದು ಪಬ್ಲಿಕ್ ಶಾಲೆಗೆ 6 ರಿಂದ 7 ಕೋಟಿ ತನಕ ಅನುದಾನ ನೀಡಲಾಗಿದೆ. ತಾಲೂಕಿನ ಅಲಬನೂರು, ಬಾದರ್ಲಿ, ಪಗಡದಿನ್ನಿ, ದಿದ್ದಿಗಿ, ಜಾಲಿಹಾಳ, 6 ಪಬ್ಲಿಕ್ ಶಾಲೆಗಳ ಸೇರಿದಂತೆ ತಾಲೂಕಿಗೆ ಒಟ್ಟು ಸರ್ಕಾರ 11 ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿದೆ. ಅಲ್ಲದೆ ತಾಲೂಕಿನಲ್ಲಿ ಈಗಾಗಲೇ 60 ಎಲ್.ಕೆಜಿ, ಯುಕೆಜಿ, ಸಹ ಆರಂಭವಾಗಿದೆ. ರಾಜ್ಯದಾದ್ಯಂತ ಪಬ್ಲಿಕ್ ಶಾಲೆಗಳಿಗೆ ಮೊದಲನೇ ವರ್ಷ 750 ಕೋಟಿ, ಎರಡನೇ ವರ್ಷವು ಸಹ 750 ಕೋಟಿ ಒಟ್ಟು 1500 ಕೋಟಿ ವೆಚ್ಚದಲ್ಲಿ ಪಬ್ಲಿಕ್ ಶಾಲೆಗಳ ಕಾಮಗಾರಿ ಪ್ರಾರಂಭ ಮಾಡಲಾಗಿದೆಂದರು. ಈ ವೇಳೆ: ಪ್ರಭುರಾಜ, ವಕೀಲರಾದ ಖಾಜಿ ಮಲ್ಲಿಕ್, ಮರಿಯಪ್ಪ ಧಡೇಸೂಗೂರು ಇದ್ದರು.

# ದತ್ತಿಗಳು ಕನ್ನಡ ಸಾಹಿತ್ಯ ಪರಿಷತ್ತನ್ನು ಪೋಷಿಸಿವೆ: ಕೆ ಕರಿಯಪ್ಪ

❑ ನೈಜ್ಯ ದೆಸೆ ನ್ಯೂಸ್

ಕಳೆದ ಶತಮಾನದಿಂದ ಇತ್ತಿಚಿಗೆ ಕನ್ನಡ ಪರ ಮನಸ್ಸುಗಳು ಕನ್ನಡ ಸಾಹಿತ್ಯದ ಮೇಲಿನ ಅಭಿಮಾನ ಅಭಿರುಚಿ ಸ್ವಾಭಿಮಾನದ ಪ್ರತೀಕವಾಗಿ ತಮ್ಮ ಮನೆಯ ಹಿರಿಯರ ಸವಿ ನೆನಪಿಗಾಗಿ ದತ್ತಿಯನ್ನು ನೀಡುವುದರ ಮೂಲಕ ಈ ನೆಲದ ಅಸ್ಮಿತೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಕಾರ್ಯಕ್ರಮಗಳ ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ದತ್ತಿಗಳು ಸಹಾಯಕವಾಗಿವೆ ಹಾಗಾಗಿ ದತ್ತಿಗಳು ಕನ್ನಡ ಸಾಹಿತ್ಯ ಪರಿಷತ್ತನ್ನು ಪೋಷಿಸುವಲ್ಲಿ ಮಹತ್ತರ ಪಾತ್ರವಹಿಸುವೆ ಎಂದು ದತ್ತಿ ದಾನಿ ಬಿ ಜೆ.ಪಿ ಮುಖಂಡರಾದ ಕೆ ಕರಿಯಪ್ಪ ಅವರು ಎಲ್ ಬಿ ಕೆ ಪದವಿ ಪೂರ್ವ ಮತ್ತು ನೊಬೆಲ್ ಪದವಿ ಮಹಾವಿದ್ಯಾಲಯದಲ್ಲಿ ನಡೆದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ 2025-26 ನೇ ಸಾಲಿನ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಭಾಗವಹಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ವಿಷಯ ಮಂಡನೆ ಮಾಡಿದ ಡಾ.ಗಂಗಾಧರ ವೀರಘಂಟೆಯವರು ಮಾತಾನಾಡಿ ಪುರಾತನದಿಂದಲೂ ಕುರಿ ಸಾಕಾಣಿಕೆಯನ್ನು ಕೇವಲ ಕುರುಬ ಸಮುದಾಯದ




ಅವರು ಮಾತ್ರ ಕುಲ ಕಸಬಾಗಿ ಮುಂದುವ-ರಿಸಿಕೊಂಡು ಬಂದಿದ್ದಾರೆ. ಆದರೆ ಆದ-ುನಿಕ ಕಾಲದ ಸಂದರ್ಭದಲ್ಲಿ ಕುಲ ಕಸಬಾಗಿ ಉಳಿಯದೇ ಎಲ್ಲಾ ಜಾತಿ ಧರ್ಮಯರಲ್ಲಿಯೂ ಉಪಜೀವನದ ಒಂದು ಉದ್ದಿಮೆಯಾಗಿ ಮುನ್ನೆಸಿಕೊಂಡಿರವುದು ಆಶದಾಯಕ ಬೆಳವಣಿಗೆ ಇಂತಹ ಕಾರ್ಯ ಕೈಗೂಡವಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಸಾಮಜಿಕವಾಗಿ ಆರ್ಥಿಕವಾಗಿ ಆಧ್ಯಾತ್ಮಿಕವಾಗಿ ಗಟ್ಟಿಯಾದರೆ ಮಾತ್ರ ಸಾದ್ಯ ಎಂದು ಮಕ್ಕಳಿಗೆ ಕರೆ ನೀಡಿದರು. ಮುಖ್ಯ ಅಥಿತಿಗಳಾದ ಎಸ್ ಶರಣೆಗೌಡ ಮಾತಾಡಿ ,ತಾವು 2003-4 ರಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅದ್ಯಕ್ಷರಾಗಿದ್ದಾಗ ಈ ದತ್ತಿ ಉಪನ್ಯಾಸ ಮಾಲಿಕೆಯ ಹೋಸ ಚಿಂತನ ಕಾರ್ಯಕ್ರಮ ಜಾರಿಗೆ ಬಂದುದ್ದು ಎಂದು ಶ್ಯಾಘಿಸಿದರು. ಹನಿಗಳನ್ನು ಹೇಳಿ ಮಕ್ಕಳನ್ನು ಮನರಂಜಿಸಿದರು.



ಇದೆ ಸಂದರ್ಭದಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬೀರಪ್ಪ ಸಭೋಜಿ ಮಾತಾನಾಡಿ ಸಂಸ್ಥೆಯ ಪಠ್ಯ ,ಫಲಿತಾಂಶ ಮತ್ತು ಪಠ್ಯೇತರ ಚಟುವಟಿಕೆಗಳ ಬಗ್ಗೆ ಹರ್ಷ ವ್ಯಕ್ತಪಡಿಸಿ, ಚುಟಕಗಳನ್ನು ಹೇಳಿ ಮನರಂಜಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕೊಡಮಾಡುವ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಬಾಜಿ ನರಾದ ಶ್ರೀ ಹುಸೇನ್ ಬಾಷಾ ಅವರನ್ನು ಪರಿಷತ್ತಿನಿಂದ ಸನ್ಮಾನಿಸಲಾಯಿತು ಹಾಗೇನೆ ಕೆ ಕ-ರಿಯಪ್ಪ ಬಿಜೆಪಿ ಮುಖಂಡರು ಅವರನ್ನು ಎಲ್ ಬಿ ಕೆ ಮತ್ತು ನೋಬೆಲ್ ಪದವಿ ಮಹಾವಿದ್ಯಾಲಯದ ಪರವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು. ಈ ಕಾರ್ಯಕ್ರಮದ ಘನ ಅಕ್ಷತೆಯನ್ನು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾದ ಹೆಚ್ ಎಫ್ ಮಸ್ಕಿ ಅವರು ವಹಿಸಿಕೊಂಡು ಮಾತನಾಡುತ್ತಾ, ಕನ್ನಡ ನಾಡು ,,ನುಡಿ ಜಲ ,ವಿಷಯಗಳ ಬಂದಾಗ ನಮ್ಮ ಸ್ವಾಭಿಮಾನದಿಂದ ಕನ್ನಡವನ್ನು ಕಟ್ಟಿ ಬೆಳೆಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಈ ಭಾಗವಾಗಿ ಪರಿಷತ್ತು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋದರ ಮೂಲಕ ಯಶಸ್ಸಿನ ಕಡೆಗೆ ಹೋಗುತ್ತೇವೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾ ಇದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು ಈ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀ ಅಂಬರೀಶಪ್ಪ ಮೈಲಾರ ಶರಣಪ್ಪ ಬರ್ಸಿ ದೇವಿರಮ್ಮ ಹಾಗೂ ಅಂಬರೀಶ್ ಅಲಬನೂರ್ ವರದಿಗಾರರು ವೇದಿಕೆ ಮೇಲಿದ್ದರು ಪರಿಷತ್ತಿನ ಸದಸ್ಯರಾದ ದುರ್ಗಪ್ಪ ಗುಡೂರು ಪ್ರಸ್ತಾವಿಕವಾಗಿ ಮಾತನಾಡಿದರು ನೊಬೆಲ್ ಪದವಿ ಮಹಾ ವಿದ್ಯಾಲಯದ ಕಾರ್ಯದರ್ಶಿಗಳಾದ ಡಾ. ಅರುಣ್ ಕುಮಾರ್ ಬೆರ್ಗಿ ಉದ್ಘಾಟಿಸಿ ಮಾತನಾಡಿದರು ಉಪನ್ಯಾಸಕಿ ಅಶ್ವಿನಿ ಪ್ರಾರ್ಥಿಸಿದರು ಸುರೇಶ್ ಮುಳ್ಳೂರ್ ಸ್ವಾಗತಿಸಿದರು ನಂದಿನಿ ಗೂಗಿ ನಿರೂಪಿಸಿದ್ರು ಕೃಷ್ಣ ರಾಠೋಡ್ ವಂದಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಕಾಯಚಿಕಿತ್ಸಾ

MD ಕಾಯಚಿಕಿತ್ಸಾ: ``Kaya'' ಎಂದರೆ ದೇಹ (body) ಮತ್ತು ``Chikitsa'' ಎಂದರೆ ಚಿಕಿತ್ಸಾ ವಿಧ ಆಗ Kaya Chikitsa ಅಂದರೆ "ಆಯುರ್ವೇದಿಕ general/internal medicine / ದೇಹಚಿಕಿತ್ಸೆ" ಕಾಯಚಿಕಿತ್ಸಾ : ವಿಭಾಗ ಕೋರ್ಸ್ ಎನ್ನುವುದು ಆಯುರ್ವೇದ ಔಷಧದಲ್ಲಿ ವಿಶೇಷ ಅಧ್ಯಯನವಾಗಿದ್ದು, ಇದು 2 ರಿಂದ 3 ವರ್ಷಗಳ ಕಾಲ ನಡೆಯುತ್ತದೆ. ಈ ಕೋರ್ಸ್ ಆಂತರಿಕ ಔಷಧದ ಮೇಲೆ ಕೇಂದ್ರೀಕರಿಸುತ್ತದೆ, ಇದರಲ್ಲಿ ಆಯುರ್ವೇದ ತತ್ವಗಳಾದ ಶಮನ್ ಮತ್ತು ಶೋಧನಾ ವಿಧಾನಗಳ ಮೂಲಕ ವಿವಿಧ ರೋಗಗಳಿಗೆ ಚಿಕಿತ್ಸೆ ನೀಡುವ ತರಬೇತಿ ನೀಡಲಾಗುತ್ತದೆ. ಈ ಕೋರ್ಸ್‌ಗೆ ಸೇರಲು AIAPGET ಮೂಲಕ ನಡೆಸಲಾಗುವ ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಎಂ.ಡಿ. ಕಯಾಚಿಕಿತ್ಸಾ (ಆಯುರ್ವೇದ ಔಷಧ). ದ್ಯಾರ್ಥಿಗಳು ತುಂಬಾ ವೈದ್ಯಚಿಕಿತ್ಸಾ ವಿಧಾನಗಳು, ಪಂಪರೆಗಳ (systems) ರೋಗಗಳು ಜೀರ್ಣ, ಉಸಿರಾಟ, ಸ್ಥೂಲಕಾಯ, ಮಧುಮೇಹ, ಜಂಟಿ ಮೂಳೆ, ತಂತುಸ್ನಾಯು, ಚರ್ಮ, ಮಟಮ್ಮೆತ್, ಜೀವಿತಶೈಲಿಗ ಮೊದಲಾದ ಆಯುರ್ವೇದ + ಹೋಲಿಸ್ಟಿಕ್ + ಸಮಗ್ರ ದೃಷ್ಟಿಕೋನದಿಂದ ಕಲಿಯುತ್ತಾರೆ.ಕೋರ್ಸ್ ಅವಧಿ: 2 ರಿಂದ 3 ವರ್ಷಗಳು.ಕೇಂದ್ರೀಕೃತ ವಿಷಯ: ಆಯುರ್ವೇದದ ಆಂತರಿಕ ಔಷಧ, ಶಮನ್ (ಶಮನಕಾರಿ) ಮತ್ತು ಶೋಧನಾ (ಶುದ್ಧೀಕರಣ) ವಿಧಾನಗಳನ್ನು ಬಳಸಿ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.ಅರ್ಹತೆ: ಈ ಕೋರ್ಸ್‌ಗೆ ಪ್ರವೇಶ ಪಡೆಯಲು, ಅರ್ಹತಾ ಪರೀಕ್ಷೆಯಾದ ಆಯುರ್ವೇದ ಪೋಸ್ಟ್ ಗ್ರಾಜುಯೇಷನ್ ಪ್ರವೇಶ ಪರೀಕ್ಷೆ (AIAPGET) ಯಲ್ಲಿ ಉತ್ತೀರ್ಣರಾಗಬೇಕು. ಸಂಯೋಜಿತ ವಿವಿಗಳು: ಕರ್ನಾಟಕದಲ್ಲಿ, ಈ ಕೋರ್ಸ್‌ಗಳನ್ನು ನೀಡುವ ಅನೇಕ ಆಯುರ್ವೇದ ಕಾಲೇಜುಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿವೆ. ಆಯುರ್ವೇದ ಡಾಕ್ಟರ್ / ಪ್ರ್ಯಾಂಚಕರು ಕ್ವಾಲಿಟಿ ಆಯುರ್ವೇದ ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯ, ಆಯುರ್ವೇದ ಕ್ಲಿನಿಕ್ / ಆಸ್ಪತ್ರೆಗೆ ವೈದ್ಯ, ವೇಲ್ನೆಸ್ & ಲೈಫ್ಸ್ಟೈಲ್ ಕೌನ್ಸಲರು / ಹೋಲಿಸ್ಟಿಕ್ ಹೀಲ್ತ್ ಎಕ್ಸ್‌ಪರ್ಟ್, ಆಯುರ್ವೇದ ಸಂಶೋಧಕ / ರಿಸರ್ಚ್ ಸೆಂಟರ್ / ಥಿಸಿಸ್‌ಅಧ್ಯಯನ, ಆಯುರ್ವೇದ ಶಿಕ್ಷಣ / ಉಪಾಧ್ಯಾಯಕ ಅಧ್ಯಾಪಕ / ಕಾಲೇಜು / ವಿಶ್ವವಿದ್ಯಾಲಯದಲ್ಲಿ

# ವಿಶ್ವ ಏಡ್ಸ್ ದಿನಾಚರಣೆ ಜಾಗೃತಿ ಜಾತ ಉದ್ಘಾಟಿಸಿದ ಶ್ರೀಮತಿ ರೂಪ ಪ್ರಧಾನ ಸಿವಿಲ್ ನ್ಯಾಯಾಧೀಶರು






❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: 01 ಡಿಸೆಂಬರ್: ತಾಲೂಕು ಕಾನೂನು ಸೇವಾ ಸಮಿತಿ ಸಿಂಧನೂರು ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು ತಾಲೂಕ ಆರೋಗ್ಯ ಇಲಾಖೆ ಮತ್ತು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಡಿ ಫಾರ್ಮಸಿ, ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಏಡ್ಸ್ ದಿನಾಚರಣೆಯ ಜಾಗೃತಿ ಜಾತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮದ ಉದ್ಘಾಟಕರಾಗಿ ಗೌರವಾನ್ವಿತ ಸನ್ಮಾನ್ಯ ಶ್ರೀಮತಿ ರೂಪ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್ ಸಿ ಮತ್ತು ಸದಸ್ಯ ಕಾರ್ಯದರ್ಶಿಗಳು ತಾಲೂಕು ಕಾನೂನು ಸೇವಾ ಸಮಿತಿ ಸಿಂಧನೂರು ಹಸಿರು ಧ್ವಜಾ ಹಾರಿಸುವುದರ ಮುಖಾಂತರ ಎಚ್‌ಐವಿ ಏಡ್ಸ್ ಜಾಗೃತಿ ಜಾತ ನಡೆಗೆ ಚಾಲನೆ ನೀಡಿದರು ಹಾಗೂ ಅವರು ಮಾತನಾಡಿ ಈ ಜಾಗೃತಿ ಕೇವಲ ಈ ಒಂದು ದಿನಕ್ಕೆ ಸೀಮಿತವಾಗದೆ.**

ವರ್ಷದ 365 ದಿನವೂ ಜಾಗೃತ ಗೊಂಡು ಸಾರ್ವಜನಿಕರಿಗೆ ಕಾಲೇಜು ಮಕ್ಕಳಿಗೆ ಸತತವಾಗಿ ಜಾಗೃತಿ ನೀಡಬೇಕಾಗಿ ಕರೆ ನೀಡಿದರು ಮತ್ತೂರ್ವ ಸನ್ಮಾನ್ಯ ಶ್ರೀ ಗೌರವಾನಿತ ಶ್ರೀಮತಿ ಸರಸ್ವತಿ ಹೋಟಕರ್ ಒಂದನೇ ಅಪಾರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ಸಿಂಧನೂರು ಉಪಸ್ಥಿತರಿದ್ದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸನ್ಮಾನ್ಯ ಶ್ರೀ ಕೆ ಭೀಮನ್ ಗೌಡ ವಕೀಲರು ಹಾಗೂ ಅಧ್ಯಕ್ಷರು ತಾಲೂಕು ನ್ಯಾಯವಾದಿಗಳ ಸಿಂಧನೂರು ವಹಿಸಿಕೊಂಡಿದ್ದರು ಶ್ರೀ ಡಾ. ಅಯ್ಯನಗೌಡ ತಾಲೂಕ ಆರೋಗ್ಯ ಅಧಿಕಾರಿಗಳು ಸಿಂಧನೂರು ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿಶ್ವ ಜಾಗೃತ ನಡೆ ನಗರದ ಕನಕದಾಸ ವೃತ್ತ ತಲುಪಿದಾಗ ಮಾತನಾಡಿ ಸಾರ್ವಜನಿಕರು ಏಡ್ಸ್ ಬಗ್ಗೆ ಭಯಗೊಳ್ಳದೆ ಜಾಗೃತಿಯನ್ನು ಹೊಂದಬೇಕು.


ಹಾಗೂ ಎಚ್‌ಐವಿ ಕಾಯಿಲೆಗೆ ರೋಗ ಉಲ್ಬನ ಗೊಳ್ಳದಂತೆ ಚಿಕಿತ್ಸೆ ಇದೆ ಎಚ್‌ಐವಿ ರೋಗಿಯ ಜೊತೆ ತಾರತಮ್ಯವನ್ನು ಮಾಡಬಾರದು ಹಾಗೂ ಹೆಚ್‌ಐವಿ ರೋಗಿಯ ಬಗ್ಗೆ ಗೌಪ್ಯತೆಯನ್ನು ಸಹ ಕಾಪಾಡಬೇಕು ಎಂದು ತಿಳಿಸಿದರು ಮತ್ತೂರ್ವ ಅತಿಥಿಯಾಗಿ ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ ಅತ್ತಾರ್ ಅವರು ಮಾತನಾಡಿ ಕೇವಲ ಏಡ್ಸ್ ಕಾರ್ಯಕ್ರಮ ಮಾತ್ರವಲ್ಲದೆ ಎಲ್ಲಾ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ ಹಾಗೂ ನರ್ಸಿಂಗ್ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳು ನಗರದ ವಿವಿಧ ಕಾಲೇಜುಗಳಿಗೆ ತೆರಳಿ ಇದರ ಬಗ್ಗೆ ಮಾಹಿತಿಯನ್ನು ನೀಡುವುದು ಹಾಗೂ ಜಾಗೃತಿಗೊಳಿಸುವುದು ನಿಮ್ಮೆಲ್ಲರ ಜವಾಬ್ದಾರಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು ಸಾರ್ವಜನಿಕರು ಎಚ್‌ಐವಿ ಕಾಯಿಲೆ ಬಗ್ಗೆ ಭಯಪಡದೆ ಸರಿಯಾದ ಚಿಕಿತ್ಸಾ ಕ್ರಮಗಳನ್ನು ಅನುಸರಿಸಿ ಎಲ್ಲಾ ಸಮ ಸಮಾಜದ ಸರಾಸರಿ ವ್ಯಕ್ತಿಗಳ ಹಾಗೆ ನೀವು ಸಹ ಜೀವಿಸಬಹುದು ಎಂದು ತಿಳಿಸಿದರು.

ಸಮಾಜವು ಮಾನಸಿಕ ಬೆಂಬಲ ನೀಡುವುದರ ಜೊತೆಗೆ ಜೊತೆ ಸೇರಿ ನಡೆಯಬೇಕು ಎಂದು ತಿಳಿಸಿದರು ಮತ್ತೋರ್ವ ಅತಿಥಿಯಾದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಪ್ರಾಚಾರ್ಯರಾದಂತಹ ಸಿರಿಲ್ ಅವರು ಹೆಚ್‌ಐವಿ ಹರಡುವ ನಾಲ್ಕು ಮಾರ್ಗಗಳ ಬಗ್ಗೆ ತಿಳಿಸಿದರು ಹೆಚ್‌ಐವಿ ಬಗ್ಗೆ ಇರುವ ತಪ್ಪು ಕಲ್ಪನೆಗಳ ಬಗ್ಗೆ ಸಾಹಸನಿಕರಿಗೆ ಮಾಹಿತಿ ನೀಡಿದರು ಕಾಲೇಜು ಹಾಗೂ ವಿವಿಧ ಸಂಸ್ಥೆಗಳಲ್ಲಿ ಜಾಗೃತಿಗೊಳಿಸಬೇಕಾದಾಗ ನಮ್ಮ ಸಹಕಾರವೂ ಇರುತ್ತದೆ ಎಂದು ಅಧ್ಯಕ್ಷರ ಅಪ್ಪಣೆಯ ಮೇರೆಗೆ ತಾಲೂಕ ಆರೋಗ್ಯ ಅಧಿಕಾರಿಗಳಿಗೆ ತಿಳಿಸಿದರು ವಿಶ್ವ ಏಡ್ಸ್ ದಿನಾಚರಣೆಯ ಜಾಗೃತ ಜಾತವು ನಗರದ ಕೋರ್ಟ್( ನ್ಯಾಯಾಲಯಗಳ ಸಂಕೀರ್ಣ ಸಿಂಧನೂರು ) ಆವರಣದಿಂದ ಪ್ರಾರಂಭವಾಗಿ ಮಹಾತ್ಮ ಗಾಂಧೀಜಿ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕ ಜಾಗೃತ ಕರೆ ನೀಡಲಾಯಿತು ವಿದ್ಯಾರ್ಥಿಗಳು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಆಶಾ ಕಾರ್ಯಕರ್ತೆಯರು ಹಾಗೂ ಸಿಂಧನೂರು ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗ ಎಆರ್‌ಟಿ ಸೆಂಟರ್ ಸಿಬ್ಬಂದಿಗಳು ಘೋಷಣೆ ಕೂಗುವುದರ ಮುಖಾಂತರ ನಗರದ ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ವರೆಗೆ ವಿಶ್ವ ಏಡ್ಸ್ ಜಾಗೃತಿ ನಡೆಗೆ ಹೆಜ್ಜೆ ಹಾಕಿದರು ಹಾಗೂ ಕಾರ್ಯಕ್ರಮದಲ್ಲಿ ಸನ್ಮಾನ್ಯ ಶ್ರೀ ಅಯ್ಯನಗೌಡ ತಾಲೂಕ ಆರೋಗ್ಯ ಅಧಿಕಾರಿಗಳು ಶ್ರೀ ಹನುಮೇಶ್ ರಾಗಲಪರ್ವಿ ಸಹಾಯಕ ಸರಕಾರಿ ಅಭಿಯೋಜಕರು ಸಿಂಧನೂರು ಶ್ರೀ ಇರ್ಫಾನ್ ಕೆ ಅಧ್ಯಕ್ಷರು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಸಿಂದನೂರು ಶ್ರೀ ಲಾರ್ಜರ್ ಸಿರಿಲ್ ಪ್ರಾಚಾರ್ಯರು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಸಿಂಧನೂರು ಶ್ರೀ ವಶಿಮ್ ಹುಸೇನ್ ಪ್ರಾಚಾರ್ಯರು ಸನ್ ರೈಸ್ ಕಾಲೇಜ್ ಆಫ್ ಫಾರ್ಮಸಿ ಸಿಂಧನೂರು ಹಾಗೂ ಶ್ರೀ ಚಕ್ರವರ್ತಿ ಡಿ ಪ್ರಾಚಾರ್ಯರು ಸನ್ರೈಸ್ ಪ್ಯಾರಾಮೆಡಿಕಲ್ ಕಾಲೇಜ್ ಸಿಂಧನೂರು ವಕೀಲರು ಸಿಂಧನೂರು ಶ್ರೀ ಕೆ ಜಗದೀಶ್ ವಕೀಲರು ಉಪಾಧ್ಯಕ್ಷರು ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು ಶ್ರೀ ದುರ್ಗೇಶ್ ವಕೀಲರು ಕಾರ್ಯದರ್ಶಿಗಳು ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು ಕುಮಾರಿ ಹೀನ ಅಂಬರೀಶ್ ಜಂಟಿ ಕಾರ್ಯದರ್ಶಿಗಳು ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು ಶ್ರೀ ಶೇಖರಪ್ಪ ಗಡೇದ್ ವಕೀಲರು ಖಜಾಂಚಿಗಳು ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು ಶ್ರೀ ಅಳ್ಳಪ್ಪ ವಕೀಲರು ಸಹಾಯಕ ಕಾನೂನು ಅಭಿ ರಕ್ಷಕರು ಸಿಂಧನೂರು ವಿಶೇಷ ಉಪನ್ಯಾಸಕರಾಗಿ ಶ್ರೀಮತಿ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಸಿಂಧನೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಚೇರಿಯ ಸಿಬ್ಬಂದಿಗಳು ?ರ್ವಜನಿಕ ಆಸ್ಪತ್ರೆ ಐಸಿಟಿಸಿ ವಿಭಾಗದ ಸಿಬ್ಬಂದಿಗಳು ಎಆರ್‌ಟಿ ವಿಭಾಗದ ಸಿಬ್ಬಂದಿಗಳು ಆಶಾ ಕಾರ್ಯಕರ್ತರು ಅಂಗನವಾಡಿ ಸನ್ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ವಿದ್ಯಾರ್ಥಿಗಳು ಶ್ರೀ ರೇಣುಕಾ ಕಾಲೇಜ್ ಆಫ್ ನರ್ಸಿಂಗ್ ಪ್ರಾಚಾರ್ಯರು ಸಿಬ್ಬಂದಿಗಳು ವಿದ್ಯಾರ್ಥಿಗಳು ಶ್ರೀ ಬಸವ ಪ್ಯಾರಾಮೆಡಿಕಲ್ ನರ್ಸಿಂಗ್ ಕಾಲೇಜ್ ಆಡಳಿತ ಮಂಡಳಿ ಪ್ರಾಚಾರ್ಯರು ಸಿಬ್ಬಂದಿಗಳು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.....

## ಗೋರ್ಕಲ್ ಗ್ರಾಮ ಪಂಚಾಯಿತಿಗೆ ಗಾಂಧಿ ಗ್ರಾಮ ಪುರಸ್ಕಾರ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ರಾಜ್ಯ ಸರ್ಕಾರದ ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆ ವತಿಯಿಂದ ನೀಡಲಾಗುವ ಗಾಂಧಿ ಗ್ರಾಮ ಪುರಸ್ಕಾರವು2023–24 ನೇ ಸಾಲಿಗೆ ತಾಲೂಕಿನ ಗೋರ್ಕಲ್ ಗ್ರಾಮ ಪಂಚಾಯಿತಿಗೆ ದೊರೆತ್ತಿದ್ದು.**



ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯರವ–ರಿಂದ ಗೋರ್ಕಲ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಕ್ತರ್ ಪಾಷಾ ಪ್ರಶಸ್ತಿ ಪತ್ರ ಹಾಗೂ ಸ್ಮಾರಣಿಕೆಯನ್ನು ಪಡೆದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮೀನಾಗೇಶ ಇದ್ದರು ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಹಾಗೂ ರಾಜ್ಯ ಗ್ರಾಮೀಣಭೀವೃದ್ಧಿ ಸಚಿವರಾದ ಪ್ರೀಯಾಂಕ ಖರ್ಗೆ ಉಪಸ್ಥಿತರಿದ್ದರು.

# ಸಿರವಾರ ತಾಲೂಕ ಮಟ್ಟದ ಮಹಿಳಾ ವಿಚಾರಗೋಷ್ಠಿ



❑ ನೈಜ್ಯ ದೆಸೆ ನ್ಯೂಸ್

**ಸಿರವಾರ: ಡಿ.01–ಒಬ್ಬಮಹಿಳೆ ಏನು ಮಾಡಿದರೂ ಅದು ಒಳಿತನ್ನೆ ಬಯಸುವ ದಾರಿ ಯಾಗಿರುತ್ತದೆ, ಪ್ರತಿಯೊಬ್ಬ ಮಹಿಳೆ ನಡೆದುಕೊಂಡು ಬಂದಿರುವ ದಾರಿಯು ಅವಳ ಸಂಸ್ಕಾರವೇ ಮೂಲಾಧಾರವಾಗಿದೆ.ಭಾರತೀಯ ಸಂಸ್ಕೃತಿ, ಸಂಪ್ರದಾಯ ಉಳಿದಿದೆ ಎಂದರೆ ಅದು ಮಹಿಳೆಯರಿಂದ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವ–ರೀಯ ವಿಶ್ವ ವಿದ್ಯಾಲಯದ ಜ್ಯೋತಿ ಅಕ್ಕ ಹೇಳಿದರು.**

ಪಟ್ಟಣದ ಸಜ್ಜಲಶ್ರೀ ಶರಣಮ್ಮ ತಾಯಿ ಶಾಖಾಮಠದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿ ವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಜ್ಞಾನ ವಿಕಾಸದಿಂದ ಭಾನುವಾರ ನಡೆದ "ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ'ದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಯನ್ನು ಉದ್ಘಾಟಿಸಿ ಮಾತನಾಡಿದರು. ಶ್ರೀಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳೆ ಯರ ಏಳಿಗೆಗೆ ಶ್ರಮಿಸುತ್ತಿದೆ, ಗ್ರಾಮಾಭಿವೃದ್ಧಿ ಯೋಜನೆ ಅಡಿ ಯಲ್ಲಿ ಮಹಿಳೆಯರ ಸಬಲೀಕರಣ, ಎಲ್ಲಾ ರಂಗಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ನೀಡುತ್ತಿರುವುದು ಪ್ರೋತ್ಸಾಹ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಶ್ರೀಕ್ಷೇತ್ರದಿಂದ ಧರ್ಮ ಉಳಿಸುವ ಕಾರ್ಯವಾಗುತ್ತಿದೆ.

ಮಹಿಳೆಯರು ಆದ್ಯಾತ್ಮಿಕತೆ ಬಗ್ಗೆ ತಿಳಿದುಕೊಳಬೇಕು. ದ್ಯಾನವು ಸಂಸಾರ ನಿರ್ವಹಣೆಗೆ ಸಹಕಾರಿಯಾಗುತ್ತದೆ. ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ನಮ್ಮ ಸಂಸ್ಕೃತಿಯ ಬಗ್ಗೆ ಸಂಸ್ಕಾರ, ಗುರು ಹಿರಿಯ ಬಗ್ಗೆ ಗೌರವ ನೀಡುವುದನ್ನು ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಶಿಕ್ಷಕಿ ಮಂಜುಳಾ ಸಗರದ ತಮ್ಮ ಉಪನ್ಯಾಸದಲ್ಲಿ ಗ್ರಾಮೀಣ ಮಟ್ಟದಲ್ಲಿರುವ ನಾವು ಕೂಡ ಗ್ರಾಮಾಭಿವೃದ್ಧಿಯ ಯೋಜನೆಗಳನ್ನು ಸದ್ಬಳಕೆ ಮಾಡಿ ಕೊಂಡು ಉನ್ನತ ವಿದ್ಯಾಭ್ಯಾಸದ ಉತ್ತಮ ಸಂಸ್ಕಾರ ನೀಡಬೇಕಾಗಿದ್ದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಯೋಜನೆಯ ಜಿಲ್ಲಾ ನಿರ್ದೇಶಕ ಮೋಹನ ನಾಯ್ಕ ಮಾತನಾಡಿ, ಮಹಿಳೆಯರು ತಮ್ಮ ಬದುಕನ್ನು ರೂಪಿಸಿಕೊಳ್ಳಲು, ಕುಟುಂಬದ ನಿರ್ವ ಹಣೆಜೊತೆಯಲ್ಲಿ ಸಾಮಾಜಿ–ಕವಾಗಿ, ಆರ್ಥಿಕವಾಗಿ, ಮಾನಸಿಕವಾಗಿ ಸಬಲ ರಾಗಲು, ಈ ಮಹಿಳಾ ವಿಚಾರ ಎಂದರು.

ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ ಪ್ರಾಸ್ತಾವಿಕವಾಗಿ ತಾಲ್ಲೂಕು ಯೋಜನಾಧಿಕಾರಿ ಚಂದ್ರಹಾಸ ಬಿ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆ, ಜನಜಾಗೃತಿಯ, ಜ್ಞಾನ ವಿಕಾಸ ಯೋಜನೆಯ ಕುರಿತು ಮಾಹಿತಿ ನೀಡಿದರು. ಸದಸ್ಯ ಅಯ್ಯನಗೌಡ ಏರಡ್ಡಿ, ಪ.ಪಂ ಅಧ್ಯಕ್ಷ ವೈ.ಭೂಪನಗೌಡ, ಜ್ಞಾನ ವಿಕಾಸ ಯೋಜನೆಯ ಪ್ರಾದೇಶಿಕ ಯೋಜನಾಧಿಕಾರಿ ಸುಧಾಗಾಂಪ್ಪರ್, ಎನ್.ರೇಣುಕಾ ಮಾತನಾಡಿದರು. ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಜ್ಞಾನಮಿತ್ರ, ಮೇಲ್ವಿಚಾರಕಿ ವನಿತಾ, ಜ್ಞಾನ ವಿಕಾಸದ ಸಮನ್ವ ಯಾಧಿಕಾರಿ ಯಶೋಧಾ, ಸೇರಿ ದಂತೆ ಯೋಜನೆಯ ಮೇಲ್ವಿಚಾರ ಕರು, ಸಿಬ್ಬಂದಿ ಸೇರಿದಂತೆ ಜ್ಞಾನ ವಿಕಾಸ ಕೇಂದ್ರಗಳ ಮಹಿಳಾ ಸದ ಸ್ಯರು ಭಾಗವಹಿಸಿದ್ದರು.

## ಡಿಸೆಂಬರ್ 07ರಂದು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ

**ರಾಯಚೂರು ಡಿಸೆಂಬರ್ 01 (ಕರ್ನಾಟಕ ವಾರ್ತೆ): ಪ್ರತಿ ವರ್ಷದಂತೆ ಈ ವರ್ಷವು ಸಹ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ಕಲಬುರಗಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರ ಕಚೇ–ರಿಯಲ್ಲಿ ಡಿಸೆಂಬರ್ 07ರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು,**

ಕಾರ್ಯಕ್ರಮಕ್ಕೆ ಯಾದಗಿರಿ, ಬೀದರ, ರಾಯಚೂರು ಹಾಗೂ ಕಲಬುರಗಿ ಜಿಲ್ಲೆಯ ಮಾಜಿ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08472–225003ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಂಗಳೂರಿನಿಂದ ಬೀದರ್ ವಿಶೇಷ ರೈಲು ಸಂಚಾರ :ಡಾ.ಬಾಬುರಾವ್

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕ್ರಿಸ್ಮಸ್ ಪ್ರಯುಕ್ತ ಬೆಂಗಳೂರು ಕ್ಯಾಂಟೋನ್ಮೆಂಟ್ – ಬೀದರ್ – ವಾಯಾ ಕಲಬುರಗಿ ವಿಶೇಷ ಎಕ್ಸ ಪ್ರೆಸ್ ರೈಲು ಕ್ರಿಸ್ಮಸ್ ಪ್ರಯುಕ್ತ ಸಂಚರಿಸಲಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ. ಬಾಬುರಾವ್ ತಿಳಿಸಿದ್ದಾರೆ.**



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬೆಂಗಳೂರು ಕ್ಯಾಂಟೋನ್ಮೆಂಟ್ – ಬಿದಾರ್ ವಿಶೇಷ ಎಕ್ಸ್ಪ್ರೆಸ್ ರೈಲು (06291) ಡಿಸೆಂಬರ್ 24ರಂದು ರಾತ್ರಿ 9:15ಕ್ಕೆ ಬೆಂಗಳೂರು ಕ್ಯಾಂಟೋನ್ಮೆಂಟ್ ರೈಲು ನಿಲ್ದಾಣದಿಂದ ಹೊರಟು, ಮರುದಿನ ಬೆಳಿಗ್ಗೆ 11:30ಕ್ಕೆ ಬೀದರ್ ತಲುಪಲಿದೆ. ಬೀದರ್ – ಬೆಂಗಳೂರು ಕ್ಯಾಂಟೋನ್ಮೆಂಟ್ ವಿಶೇಷ ಎಕ್ಸ್ಪ್ರೆಸ್ ರೈಲು (06292) ಡಿಸೆಂಬರ್ 25ರಂದು ಮಧ್ಯಾಹ್ನ 1:00ಕ್ಕೆ ಬೀದರ ನಿಲ್ದಾಣದಿಂದ ನಿರ್ಗಮಿಸಿ ಮರುದಿನ ಬೆಳಗ್ಗೆ 4:00ಕ್ಕೆ ಬೆಂಗಳೂರು ಕ್ಯಾಂಟೋನ್ಮೆಂಟ್ನಲ್ಲಿ ತಲುಪಲಿದೆ.

ರೈಲು ನಿಲ್ದಾಣಗಳಲ್ಲಿ ನಿಲ್ಲುವುದು: ಯಲಹಂಕ, ಹಿಂದೂಪೂರ, ಧರ್ಮವರಂ, ಅನಂತಪುರ, ಗುಂತಕಲ್, ಆದೋನಿ, ಮಂದರಾಳ್ಯಂ ರಸ್ತೆ, ರಾಯಚೂರು, ಕೃಷ್ಣ, ಯಾದಗಿರಿ, ವಾಡಿ, ಶಹಾಬಾದ್, ಕಲಬುರಗಿ, ಹುಮನಬಾದ್ ರೈಲು ನಿಲ್ದಾಣದಲ್ಲಿ ಎರಡು ಕಡೆಯ ಸಂಚಾರದಲ್ಲಿ ನಿಲುಗಡೆಯಾಗಲಿವೆ. ಎರಡು ಕಡೆ ಪ್ರಯಾಣದ ಬುಕ್ಕಿಂಗ್ ವ್ಯವಸ್ಥೆ ಪ್ರಾರಂಭವಾಗಿದೆ ಎಂದು ಅವರು ತಿಳಿಸಿದ್ದಾರೆ.

# ರಾಯಚೂರಿನಲ್ಲಿ ವಿಶ್ವ ಏಡ್ಸ್ ದಿನಾಚರಣೆ ಏಡ್ಸ್ ಕಾಯಿಲೆ ನಿರ್ಮೂಲನೆಗೆ ಸಾರ್ವಜನಿಕರು ಸಹಕರಿಸಬೇಕು: ನ್ಯಾ.ಹೆಚ್.ಎ.ಸಾತ್ವಿಕ್

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 01 (ಕರ್ನಾಟಕ ವಾರ್ತೆ): ಭಯಾನಕ ಏಡ್ಸ್ ಕಾಯಿಲೆಯನ್ನು 2030ರ ವೇಳೆಗೆ ಸಂಪೂರ್ಣ ನಿರ್ಮೂಲನೆ ಮಾಡಲು ಸರ್ಕಾರ, ಆರೋಗ್ಯ ಇಲಾಖೆ ಹತ್ತು-ಹಲವು ಯೋಜನೆಗಳನ್ನು ಹಮ್ಮಿಕೊಂಡು ಶ್ರಮಿಸುತ್ತಿದೆ. ಇದಕ್ಕೆ ಜಿಲ್ಲೆಯ ಸಾರ್ವಜನಿಕರು ಸಹಕಾರ ನೀಡಬೇಕೆಂದು ಗೌರವಾನ್ವಿತ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಶ್ರೇಣಿಯ ದಿವಾನಿ ನ್ಯಾಯಾಧೀಶರಾದ ಹೆಚ್.ಎ.ಸಾತ್ವಿಕ್ ಅವರು ಹೇಳಿದರು.**




ಡಿಸೆಂಬರ್ 01ರಂದು ಸೋಮವಾರ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಡ್ಯಾಪ್ಕೋ, ಪೊಲೀಸ್ ಇಲಾಖೆ, ಯುವಜನ ಸಬಲೀಕರಣ ಇಲಾಖೆ, ಶಿಕ್ಷಣ ಇಲಾಖೆ, ರಿಮ್ಸ್, ರೋಟರಿ, ಲಯನ್ಸ್ ಕ್ಲಬ್, ಎನ್‌ವೈಕೆ, ನವೋದಯ ವೈದ್ಯಕೀಯ ಕಾಲೇಜು, ಎ.ಎಮ್.ಈ.ಎಸ್ ಡೆಂಟಲ್ ಕಾಲೇಜು, ಹೊಸ ಬೆಳಕು, ರೆಡ್ ರಿಬ್ಬನ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಆಶ್ರಯದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಹಸಿರು ಬಾವುಟ ತೋರಿ ಅವರು ಮಾತನಾಡಿದರು. ಜಗತ್ತಿನ ಎಲ್ಲ ದೇಶಗಳು ಸೋಂಕಿನ ತಡೆಗೆ ಹಗಲಿರಳು ಶ್ರಮಿಸುತ್ತಿವೆ. ಇದಕ್ಕೆ ಭಾರತವು ಹೊರತಾಗಿಲ್ಲ. ಸೋಂಕಿತರನ್ನು ಕಳಂಕರನ್ನಾಗಿ ಮಾಡದೇ ಸಮಾಜಮುಖಿಯಾಗಿಸಲು ಮತ್ತು ಅವರನ್ನು ಎಲ್ಲರಂತೆ ಕಾಣಬೇಕಿದೆ.

ಜೊತೆ ಜೊತೆಗೆ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಯುವ ಜನತೆಗೆ ಹೆಚ್ಚು ಸೋಂಕಿಗೆ ಒಳಗಾಗುತ್ತಿರುವ ಗಂಭೀರತೆಯನ್ನು ಸಮುದಾಯದ ಪ್ರತಿಯೊಬ್ಬರೂ ಸಹ ಅರ್ಥಮಾಡಿಕೊಂಡು ಇಂದಿನಿಂದಲೇ ಜಾಗೃತರಾಗಬೇಕು. ಸೋಂಕು ಮುಕ್ತ ರಾಯಚೂರು ಜಿಲ್ಲೆಯನ್ನಾಗಿಸಲು ಪ್ರತಿಯೊಬ್ಬರು ಶ್ರಮಿಸಬೇಕೆಂದರು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಆಧುನಿಕತೆಯ ಜಂಜಡಗಳ ಮಧ್ಯದಲ್ಲಿರುವ ಯುವಜನತೆಯು ತಮ್ಮ ತಂದೆ, ತಾಯಿ, ಗುರುಗಳ ಮಾರ್ಗದರ್ಶನ ಪಡೆಯುವ ಮೂಲಕ ತಮ್ಮ ತಮ್ಮತನ ಉಳಿಸಿಕೊಳ್ಳುವ ಮೂಲಕ ಹೆಚ್‌ಐವಿ ಸೋಂಕಿನ ಹೊಸ ಪ್ರಕರಣಗಳ ತಡೆಗೆ ಕೈಜೊಡಿಸಬೇಕಿದೆ ಎಂದರು. ಪ್ರಸ್ತುತ ವರ್ಷ ಜಿಲ್ಲೆಯಲ್ಲಿ 55,275 ಜನರನ್ನು ಪರೀಕ್ಷಿಸಲಾಗಿ 236 ಜನರಿಗೆ ಸೋಂಕೀರುವುದು ಕಂಡುಬಂದಿದ್ದು, ಇದರಲ್ಲಿ ಯುವ ಸಮುದಾಯದ ಸಂಖ್ಯೆ ಹೆಚ್ಚಳವಾಗುತ್ತಿರುವುದು ಕಳವಳದ ಸಂಗತಿಯಾಗಿದೆ.

ಒಮ್ಮೆ ಸೋಂಕಿಗೆ ಒಳಗಾದಲ್ಲಿ ಜೀವನಪೂರ್ತಿ ಜೊತೆಗೆ ಇರುವ ಹೆಚ್‌ಐವಿ ಏಡ್ಸ್‌ನಿಂದ ಯುವಜನತೆಯನ್ನು ಪಾರುಮಾಡಲು ಎಲ್ಲರೂ ಸೇರಿ ಪ್ರಯತ್ನಿಸೋಣ ಎಂದು ಮನವಿ ಮಾಡಿದರು. ಎಚ್.ಐ.ವಿ ಮತ್ತು ಏಡ್ಸ್ ಕಾಯಿಲೆಯು ಕಳೆದ 40 ವರ್ಷಗಳಿಂದ ಮಾನವ ಜನಾಂಗವನ್ನು ಕಾಡುತ್ತಿದೆ. ಏಡ್ಸ್ ರೋಗವನ್ನು ಸಮಾಜದಿಂದ ಸಂಪೂರ್ಣವಾಗಿ ತೊಲಗಿಸಲು ಜಿಲ್ಲಾ ಮಟ್ಟದಿಂದ ತಾಲೂಕು ಹಾಗೂ ಗ್ರಾಮ ಮಟ್ಟದವರೆಗೆ ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳನ್ನು ವಿಸ್ತರಿಸಲಾಗಿದೆ ಎಂದರು.

**ಏಡ್ಸ್ ಕುರಿತು ವ್ಯಾಪಕ ಪ್ರಚಾರ:** ಏಡ್ಸ್ ಕು–ರಿತು ಜನಜಾಗೃತಿಗಾಗಿ ಆರೋಗ್ಯ ಇಲಾಖೆಯ ಐಇಸಿ ಕಾರ್ಯಕ್ರಮಗಳ ಮೂಲಕ ಜಿಲ್ಲೆಯ ಎಲ್ಲ ತಾಲೂಕು, ಗ್ರಾಮಗಳಲ್ಲಿ ಜಾನಪದ ಕಲಾ ತಂಡಗಳ ಮೂಲಕ ಅರಿವು ಮೂಡಿಸಿ ಮನೆಮನೆಗೆ ಮಾಹಿತಿ ತಲುಪಿಸಲಾಗುತ್ತಿದೆ. ಕರಪತ್ರ, ಪೋಸ್ಟರ್, ಬಿತ್ತಿಪತ್ರ ಮತ್ತು ಮಾಧ್ಯಮಗಳ ಮೂಲಕ ಏಡ್ಸ್ ಕುರಿತು ವ್ಯಾಪಕ ಪ್ರಚಾರ ಮಾಡಲಾಗುತ್ತಿದೆ. ಯುವ ಸಮೂಹ ಕೇಂದ್ರಿಕರಿಸಿ, ವಿವಿಧ ರೀತಿಯ ಅರಿವು ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

**ಸಾಧಕರಿಗೆ ಸನ್ಮಾನ:** ರಾಜ್ಯ ಮಟ್ಟದಲ್ಲಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮೊದಲ ಸ್ಥಾನ ಪಡೆದ ರಾಯಚೂರು ತಾಲೂಕಿನ ಸಗಮಕುಂಟಾ ಸರಕಾರಿ ಪ್ರೌಢಶಾಲಾ ವಿಧ್ಯಾರ್ಥಿಗಳು, ಮುಖ್ಯ ಶಿಕ್ಷಕರು ಹಾಗೂ ಸೋಂಕಿತ ಗರ್ಭಿಣಿಯರ ಹೆರಿಗೆ ಮಾಡಿದ ರಿಮ್ಸ್ ಪ್ರಸೂತಿ ತಜ್ಞರು, ಹೆಚ್ಚು ಪರೀಕ್ಷೆ ಕೈಗೊಂಡ ಜಹೀರಾಬಾದ್ ನಗರ ಆರೋಗ್ಯ ಕೇಂದ್ರ ವೈದ್ಯಾಧಿಕಾ–ರಿಯವರಿಗೆ ವಿವಿಧ ಗಣ್ಯರಿಂದ ಸನ್ಮಾನಿಸಲಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ: ಏಡ್ಸ್ ಕು–ರಿತು ಜನಜಾಗೃತಿ ಜಾಥಾನಡಿಗೆಯು ಡಿಎಚ್‌ಒ ಕಚೇ–ರಿಯಿಂದ ಆರಂಭಗೊಂಡು, ಮಹಾವೀರ್ ಸರ್ಕಲ್, ಭಗತ್ ಸಿಂಗ್ ಸರ್ಕಲ್ ಮೂಲಕ ಡಿಎಚ್‌ಒ ಕಚೇರಿಗೆ ತಲುಪಿತು. ಜಾಥಾದಲ್ಲಿ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ವಿಜಯಶಂಕರ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಂ.ಎನ್. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ ಕೆ, ರಿಮ್ಸ್ ಪ್ರಸೂತಿ ತಜ್ಞೆ ಡಾ.ಇಸ್ರತ್ ಸಿದ್ದಿಕಿ, ಎಎಮ್‌ಇಎಸ್ ದಂತ ಕಾಲೇಜಿನ ಡಾ.ಸೋಮನಾಥ, ಡಾ.ಅರುಣಾ, ಮಾನಸಿಕ ತಜ್ಞರಾದ ಮನೋಹರ ಪತ್ತಾರ, ರಿಮ್ಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಶೈಲ್ ಶಂಕರ ರೆಡ್ಡಿ, ಸರಕಾರಿ ಮಹಿಳಾ ಕಾಲೇಜು ಪ್ರಾಂಶುಪಾಲರಾದ ಡಾ.ಸುಗುಣಾ, ರೆಡ್ ಕ್ರಾಸ್ ಕಾರ್ಯದರ್ಶಿ ಅತ್ತಾವುಲ್ಲಾ, ಜಿಲ್ಲಾ ಸಂಚಾಲಕರು ಡಾ.ದಂಡಪ್ಪ ಬಿರಾದಾರ, ಡಿಹೆಚ್‌ಇಓ ಈಶ್ವರ ದಾಸಪ್ಪನವರ, ಡ್ಯಾಪ್ಕೋ ಜಿಲ್ಲಾ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಡಿವೈಹೆಚ್‌ಇಓ ಬಸಯ್ಯ, ಅರ್ಚನಾ, ಸಂತೋಷ ಕುಮಾರ್ ಸೇರಿದಂತೆ ಡ್ಯಾಪ್ಕೋ, ಟಿಬಿ ಸಿಬ್ಬಂದಿ ಹಾಗೂ ಕಾಲೇಜು ವಿದ್ಯಾರ್ಥಿಗಳು ಇದ್ದರು.